# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 72 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 12.09.2024 • ಗುರುವಾರ • ಪುಟ:04 • ಬೆಲೆ:2
Volume:02 • Issue: 72 • PRGI No:KARKAN/2023/88055 • VIJAYANAGARA • 12.09.2024 • Thursday • Page:04 • Rs:2



HAMPI TIMES
No.1 Leading Local News Paper
85,000
E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201

HAMPI TIMES VIJAYANAGARA
ನಿರೀಕ್ಷಿಸಿ
ಆಂಗ್ಲ ಮಾಧ್ಯಮದ SSLC ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ
ಆಯ್ದ ವಿಷಯಗಳ ಸರಳ ಅಭ್ಯಾಸಕ್ಕಾಗಿ ಸುಲಭ ಮಾರ್ಗೋಪಾಯಗಳು
ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ ಶೀಘ್ರದಲ್ಲೇ....!
ವಿದ್ಯಾರ್ಥಿಗೊಂದು ದಿನಪತ್ರಿಕೆ - ಸುಂದರ ಬದುಕಿಗೆ ದಾರಿ
ದಿನಪತ್ರಿಕೆ ಓದುವುದರಿಂದ ...
- ಭಾಷಾ ಕೌಶಲ್ಯ
- ವ್ಯಕ್ತಿತ್ವ ವಿಕಾಸ
- ಚಿಂತನೆಗಳ ವಿಕಾಸ
- ಸಾಮಾನ್ಯ ಜ್ಞಾನ
- ಸಮಾಜದ ಬಗ್ಗೆ ಅರಿವು
ಹಂಪಿ ಟೈಮ್ಸ್ ಇ-ಪೇಪರ್
94486 33038 www.hampitimes.com / epaper.hampitimes.com Vijayanagara hampitimes@gmail.com


**ಮೈಕ್ರೋ ನ್ಯೂಸ್**

## ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಸಹಾಯಧನಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2020–21 ರಿಂದ 2023–24ನೇ ಸಾಲಿನಲ್ಲಿ ಫಲಾನುಭವಿ ಆಧಾರಿತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯ ವಿವಿಧ ಘಟಕಗಳಿಗೆ ಸಹಾಯಧನ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

1) ಕನ್‌ಸ್ಟ್ರಕ್ಷನ್ಸ್ ಆಫ್ ನ್ಯೂ ರಿಯರಿಂಗ್ ಪೊಂಡ್, 2) ಕನ್‌ಸ್ಟ್ರಕ್ಷನ್ಸ್ ಆಫ್ ಬಯೋಪ್ಲಾಕ್ ಪೊಂಡ್ಸ್ ಫಾರ್ ಬ್ರಾಕಿಶ್ ವಾಟರ್/ಸಲೈನ್/ಅಲ್ಕಲೈನ್,. 3) ಕನ್‌ಸ್ಟ್ರಕ್ಷನ್ಸ್ ಆಫ್ ನ್ಯೂ ಪೊಂಡ್, ಫಾರ್ ಸಲೈನ್/ ಅಲ್ಕಲೈನ್/ ಏರಿಯಾಸ್,. 4) ಎಸ್ಟಾಬ್ಲಿಶ್‌ಮೆಂಟ್ ಆಫ್ ಲಾರ್ಜ್ ಆರ್‌ಎಎಸ್,.5) ಮೋಟಾರ್ ಸೈಕಲ್ ವಿಥ್ ಐಸ್ ಬಾಕ್ಸ್, 6) ಸೈಕಲ್ ವಿಥ್ ಐಸ್ ಬಾಕ್ಸಸ್ 7) ನ್ಯು ಗ್ರೋ ಔಟ್ ಪೊಂಡ್ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳಾ ಫಲಾನುಭವಿಗಳಿಗೆ ಘಟಕ ವೆಚ್ಚದ 60ರಷ್ಟು ಹಾಗೂ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚ 40 ರಂತೆ ಸಹಾಯಧನ ನೀಡಲಾಗುವುದು. ಅರ್ಜಿಗಳನ್ನು ಸೆಪ್ಟೆಂಬರ್ 27ರೊಳಗೆ ಸಂಬಂಧಿಸಿದ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಉಪನಿರ್ದೇಶಕರು, ಬಳ್ಳಾರಿ ಜಿಲ್ಲೆ ಮೊ.ಸಂ:9449593156, ಮೀನುಗಾರಿಕೆ ಸಹಾಯಕ ನಿರ್ದೇಶಕರು, ಹೊಸಪೇಟೆ, ಹಡಗಲಿ ಮೊ.ಸಂ:9620177588 ಮೀನುಗಾರಿಕೆ ಸಹಾಯಕ ನಿರ್ದೇಶಕರು ಕೂಡ್ಲಿಗಿ, ಹರಪನಹಳ್ಳಿ ಮೊ.ಸಂ: 8217725319 ಇವರನ್ನು ಸಂಪರ್ಕಿಸಿ.

## ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಹೂವಿನಹಡಗಲಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನೆಯ ವ್ಯಾಪ್ತಿಯ ಖಾಲಿ ಇರುವ ಹ್ಯಾರಡ–1ನೇ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಹುದ್ದೆಯ ಗೌರವ ಸೇವೆ ಪಡೆಯಲು ಸೆಪ್ಟೆಂಬರ್ 7ರಂದು ಪ್ರಕಟಣೆ ಹೊರಡಿಸಲಾಗಿದೆ. ಆನ್‌ಲೈನ್ ಮೂಲಕ ಅಕ್ಟೋಬರ್ 6ರ ಸಂಜೆ 5.30ರವರೆಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಅಭ್ಯರ್ಥಿಗಳು https://karnemakaone.kar.nic.in/abcd/ ವೆಬ್‌ಸೈಟ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಹೂವಿನಹಡಗಲಿ ಇಲ್ಲಿ, ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮುಖ್ಯಮಂತ್ರಿಗಳಿಗೆ ಶಾಸಕ ಹೆಚ್.ಆರ್. ಗವಿಯಪ್ಪ ಅಭಿನಂದನೆ

**ಹಂಪಿ ಟೈಮ್ಸ್ ಹೊಸಪೇಟೆ**

ನೂತನ ವಿಜಯನಗರ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯ ಜಿಲ್ಲಾಮಟ್ಟದ ಕಚೇರಿ ಸೃಜನೆ ಮಾಡಿರುವುದಕ್ಕೆ ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಹೆಚ್.ಆರ್.ಗವಿಯಪ್ಪ ಅವರು ಮುಖ್ಯಮಂತ್ರಿಗಳಿಗೆ ಅಭಿನಂದನೆ ತಿಳಿಸಿದ್ದಾರೆ.

ನೂತನವಾಗಿ ರಚನೆಗೊಂಡ ವಿಜಯನಗರ ಜಿಲ್ಲೆಗೆ ಈಗಾಗಲೇ ವಿವಿಧ ಜಿಲ್ಲಾಮಟ್ಟದ ಇಲಾಖೆಗಳು ಸೃಜನೆಯಾಗಿರುತ್ತವೆ. ಆದರೆ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯು ಅಸ್ತಿತ್ವದಲ್ಲಿ ಇಲ್ಲದಿರುವುದರಿಂದ ಜಿಲ್ಲೆಯ ಮೀನುಗಾರರ ಕುಂದುಕೊರತೆಗಳ ಬಗ್ಗೆ ಬಳ್ಳಾರಿಯ ಜಿಲ್ಲಾಮಟ್ಟದ >>3

# ಫೀ ನಿಯಮ ಪಾಲಿಸದ ಶಾಲೆಗಳ ವಿರುದ್ಧ ಕ್ರಮ ನಿಶ್ಚಿತ

### ಖಾಸಗಿ ಶಾಲೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿ ಶುಲ್ಕ ನಿಗಧಿಗೆ ಖಾಸಗಿ ಶಾಲೆಯ ಮುಖ್ಯಸ್ಥರೊಂದಿಗೆ ಸಭೆ

### ಡಿಸಿ ಎಂ.ಎಸ್.ದಿವಾಕರ ಸೂಚನೆ | ಖಾಸಗಿ ಶಿಕ್ಷಣ ಸಂಸ್ಥೆಗಳು ಶುಲ್ಕ ಪಡೆಯುವುದರಲ್ಲಿ ಪಾರದರ್ಶಕತೆ ತೋರಲಿ





**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯಲ್ಲಿನ ಎಲ್ಲ ಅನುದಾನ ರಹಿತ ಖಾಸಗಿ ಶಾಲೆಗಳು ಡಿಕ್ಲೇರ್ ಮಾಡಿದ ಶುಲ್ಕದ ಸ್ವರೂಪವನ್ನು ಸಾರ್ವಜನಿಕರಿಗೆ ಸುಲಭವಾಗಿ ಕಾಣಿಸುವಂತೆ ಹಾಕಬೇಕು. ಸೂಚನೆ ಪಾಲನೆ ಮಾಡದ ಶಾಲೆಗಳಿಗೆ ನೋಟೀಸ್ ನೀಡಲಾಗುವುದು. ಇದುವರೆಗೆ ಶುಲ್ಕದ ಸ್ವರೂಪವನ್ನು ಘೋಷಿಸದ ಶಾಲೆಗಳ ಸಿಆರ್‌ಸಿ ಚೆಕ್ ಮಾಡಬೇಕು ಎಂದು ಲ್ಲಾಧಿಕಾರಿ ಎಂ.ಎಸ್.ದಿವಾಕರ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಜಯನಗರ ಜಿಲ್ಲೆಯ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಪಡೆಯುವ ಶುಲ್ಕ ನಿಗಧಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲೆಯ ಎಲ್ಲ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಆಯಾ ಶಾಲೆಗಳ ಮುಖ್ಯಾಧ್ಯಾಪಕರೊಂದಿಗೆ ಸಭೆ ನಡೆಸಿ ಮಾತನಾಡಿದರು. ಖಾಸಗಿ ಶಾಲೆಗಳಲ್ಲಿ ನಿಗದಿಪಡಿಸಿದ ಪ್ರವೇಶ ಶುಲ್ಕ ಪಟ್ಟಿಯನ್ನು ಆಯಾ ಶಾಲಾ ಆಡಳಿತ ಮಂಡಳಿ ಎಲ್ಲರಿಗೂ ಕಾಣುವ ಸ್ಥಳದಲ್ಲಿ ಹಾಕುವುದರ ಜೊತೆಗೆ ಜಿಲ್ಲಾಡಳಿತಕ್ಕೂ ಪಟ್ಟಿ ಸಲ್ಲಿಸಬೇಕು. ಶುಲ್ಕ ಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾಡಳಿತ ವೆಬ್‌ಸೈಟ್‌ನಲ್ಲೂ ಪ್ರದರ್ಶಿಸಲಿದೆ. ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಪ್ರತಿ ಕ್ಯಾಲೆಂಡರ್ ವರ್ಷದ ಡಿಸೆಂಬರ್ 31ರೊಳಗೆ ಮುಂದಿನ ಕ್ಯಾಲೆಂಡರ್ ವರ್ಷದಿಂದ ಪ್ರಾರಂಭವಾಗುವ ಮುಂಬರುವ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಸಂಗ್ರಹಿಸಬೇಕಾದ ಶುಲ್ಕಗಳ ಸ್ವರೂಪವನ್ನು ಮತ್ತು 31ನೇ ಮಾರ್ಚರಂದು ಅಂತ್ಯಗೊಳ್ಳುವ ಹಿಂದಿನ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನಾ ವರದಿಗಳನ್ನು ಕೂಡಲೇ ಸಲ್ಲಿಸಬೇಕು ಎಂದು 2019ರಲ್ಲಿಯೇ ಅಧಿಸೂಚನೆ ಹೊರಡಿಸಿ ತಿಳಿಸಲಾಗಿರುತ್ತದೆ. ಈ ನಿಯಮ ಪಾಲನೆಯಾಗಬೇಕು ಎಂದು ತಿಳಿಸಿದರು.

31ನೇ ಮಾರ್ಚರಂದು ಅಂತ್ಯಗೊಳ್ಳುವ ಹಿಂದಿನ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನಾ ವರದಿಗಳನ್ನು ಸಲ್ಲಿಸಬೇಕು ಎನ್ನುವ ವಿಷಯದಲ್ಲಿ ಸಹ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಸಿಎ ಅವರಿಂದ ಒಂದಕ್ಕಿಂತ ಹೆಚ್ಚು ಲೆಕ್ಕ ಪರಿಶೋಧನಾ ವರದಿ ನೀಡುವುದು, ನಿಯಮಬಾಹೀರವಾಗಿ ಲೆಕ್ಕ ಪರಿಶೋಧನಾ ವರದಿ ಸಿದ್ಧಪಡಿಸಿ ಸಲ್ಲಿಸುವುದು ಸಹ ಕಂಡು ಬಂದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡುವುದಾಗಿ ಎಚ್ಚರಿಕೆ ನೀಡಿದರು. ಖಾಸಗಿ ಶಿಕ್ಷಣ ಸಂಸ್ಥೆಗಳು ಶುಲ್ಕ ಪಡೆಯುವುದರ ಬಗ್ಗೆ ಯಾರಿಂದಲೂ ದೂರುಗಳು ಬರಬಾರದು ಎಂಬುದು ನಮ್ಮ ಉದ್ದೇಶವಾಗಿದೆ. ಈ ಬಗ್ಗೆ ಎಲ್ಲರಿಗೂ ಮನವರಿಕೆ ಮಾಡಲು ಜಿಲ್ಲೆಯ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಸಭೆ ಕರೆಯಲಾಗಿದೆ ಎಂದು ತಿಳಿಸಿದರು.

ಖಾಸಗಿ ಶಾಲೆಗಳಲ್ಲಿನ ಶಿಕ್ಷಣ ವ್ಯವಸ್ಥೆ ಹಾಗೂ ಅಲ್ಲಿನ ಶಿಕ್ಷಕರ ಬಗ್ಗೆ ನಮಗೆ ಗೌರವ ಭಾವನೆ ಇದೆ. ಆ ಗೌರವ ನಿರಂತರವಾಗಿ ಉಳಿಯಬೇಕು ಎಂದು ನಾವು ಶುಲ್ಕದ ಸ್ವರೂಪಕ್ಕೆ ಸಂಬಂಧಿಸಿದಂತೆ ಆಗಾಗ ಸಲಹೆ ನೀಡುತ್ತೇವೆ. ಆದಾಗ್ಯೂ ಸಹ ನಿಯಮ ಪಾಲನೆ ಮಾಡದೇ ಇರುವುದು ಕಂಡುಬಂದಲ್ಲಿ ನಿಯಮಾನುಸಾರ ಕ್ರಮ ಜರುಗಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಜಿಲ್ಲೆಯ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನಿಗದಿಪಡಿಸಿದಕ್ಕಿಂತ ಹೆಚ್ಚಿಗೆ ಶುಲ್ಕ ಪಡೆಯಬಾರದು. ಜಾಸ್ತಿ ಪಡೆದುಕೊಳ್ಳುತ್ತಿರುವುದರ ಬಗ್ಗೆ ಲಿಖಿತ ದೂರುಗಳು ಬಂದಲ್ಲಿ ಕ್ರಮ ಜರುಗಿಸಲು ನಮಗೆ ಅಧಿಕಾರವಿದೆ ಎಂದು ಸ್ಪಷ್ಟಪಡಿಸಿದರು.

ಅನುದಾನರಹಿತ ಖಾಸಗಿ ಶಾಲೆಗಳಲ್ಲಿ ಪಡೆಯುವ ಶುಲ್ಕವನ್ನು ಇಲಾಖಾ ವೆಬ್‌ಸೈಟನಲ್ಲಿ ಪ್ರಕಟಿಸುವಂತೆ 2019ರಲ್ಲಿನ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಆದಾಗ್ಯೂ ಶಿಕ್ಷಣ ಸಂಸ್ಥೆಗಳು ಶುಲ್ಕದ ವಿವರವನ್ನು ಪ್ರಕಟಿಸದೇ ಇರುವುದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದರು. ಸಭೆಯಲ್ಲಿ ಡಿಡಿಪಿಐ ಹನುಮಕ್ಕ, ಆಯಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಅಧ್ಯಕ್ಷರು, ಸದಸ್ಯರು, ಬೇರೆ ಬೇರೆ ಶಾಲೆಗಳ ಮುಖ್ಯ ಅಧ್ಯಾಪಕರು ಇದ್ದರು.

### ನಿಮ್ಮೊಂದಿಗಿರಲಿದೆ ಜಿಲ್ಲಾಡಳಿತ

ಜಿಲ್ಲೆಯ ಶೈಕ್ಷಣಿಕ ಬೆಳವಣಿಗೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪಾತ್ರ ಸಹ ಪ್ರಮುಖವಾಗಿದೆ. ಇದು ಜಿಲ್ಲಾಡಳಿತದ ಗಮನಕ್ಕಿದೆ. ಹಿಂದಿನ ವರ್ಷದ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಕುಸಿತವಾಗಿದೆ. ಇನ್ಮುಂದೆ ಫಲಿತಾಂಶ ಸುಧಾರಣೆಯಾಗಲೇಬೇಕು. ವಿಜಯನಗರ ಜಿಲ್ಲೆಯಲ್ಲಿ ಕಡು ಬಡವರು, ಹಿಂದುಳಿದ ವರ್ಗದವರ ಸಂಖ್ಯೆ ಹೆಚ್ಚಿದ್ದು, ಈ ಭಾಗದ ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ಉನ್ನತ ಶಿಕ್ಷಣಕ್ಕೆ ಹೋಗಲು ತಮ್ಮೆಲ್ಲರ ಸಹಕಾರ ಬೇಕು ಎಂದು ಜಿಲ್ಲಾಧಿಕಾರಿಗಳು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮನವಿ ಮಾಡಿದರು. ಶುಲ್ಕ ಸ್ವರೂಪದ ಬಗ್ಗೆ ಚರ್ಚಿಸುವುದಕ್ಕಾಗಿಯೇ ಡೇರಾ ಸಮಿತಿ ಇರುವುದಿಲ್ಲ. ಖಾಸಗಿ ಶಾಲೆಗಳಲ್ಲಿ ಏನಾದರು ಕುಂದುಕೊರತೆಗಳಿದ್ದರೆ ಅದನ್ನು ಸಹ ಚರ್ಚಿಸಿ ಸರಿಪಡಿಸಬಹುದಾಗಿದೆ ಎಂದ ಜಿಲ್ಲಾಧಿಕಾರಿಗಳು, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಯಾವುದೇ ರೀತಿಯ ಸಮಸ್ಯೆಗಳಿರುವ ಬಗ್ಗೆ ತಿಳಿಸಿದಲ್ಲಿ ಜಿಲ್ಲಾಡಳಿತ ಜೊತೆಯಿರಲಿದೆ ಎಂದರು.

### ಶಾಲಾ ವಾಹನಗಳು ಸುಸ್ಥಿತಿಯಲ್ಲಿರಲಿ

ಎಲ್ಲ ಅನುದಾನ ರಹಿತ ಖಾಸಗಿ ಶಾಲೆಗಳಲ್ಲಿ ಪ್ರಾದೇಶಿಕ ಸಾರಿಗೆ ಇಲಾಖೆಯ ನಿಯಮಗಳನ್ನು ಪಾಲನೆ ಮಾಡಬೇಕು. ದುರಸ್ತಿಗೆ ಬಂದಿರುವ, ಟೈಯರ್ ಕಿತ್ತು ಹೋದ ಬಸ್‌ಗಳನ್ನು ಬಳಸಬಾರದು. ಲೇಸೆನ್ಸ್ ಇಲ್ಲದವರ ಕೈಗೆ ಶಾಲಾ ವಾಹನ ನೀಡಬಾರದು. ಈ ಬಗ್ಗೆ ನಿರ್ಲಕ್ಷ್ಯ ವಹಿಸಿ ಶಾಲಾ ವಾಹನಗಳು ಅಪಘಾತಕ್ಕೀಡಾಗುವುದು ಕಂಡು ಬಂದಲ್ಲಿ ಅಂತಹ ಖಾಸಗಿ ಶಾಲೆಗಳ ವಿರುದ್ಧ ಯಾವುದೇ ಮುಲಾಜಿಲ್ಲದೇ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

### ಮೂಲಭೂತ ಸೌಕರ್ಯಕ್ಕೆ ಗಮನಕೊಡಿ

ವಿಜಯನಗರ ಜಿಲ್ಲೆಯ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ಸಂಖ್ಯೆಗಣುಗುಣವಾಗಿ ಶೌಚಾಲಯಗಳ ಮತ್ತು ನೀರಿನ ವ್ಯವಸ್ಥೆ ಇರಬೇಕು. ಶೌಚಕ್ಕೆ ಹೋಗಬೇಕಾಗುತ್ತದೆ ಎಂದು ನೀರು ಕುಡಿಯದೇ ಬಾಲಕಿಯರು ಕಾಯಿಲೆಗಳಿಗೆ ಬೀಳುವ ದುಸ್ಥಿತಿಯಿದೆ.
ಉತ್ತಮ ಸ್ಥಿತಿಯ ಶೌಚಾಲಯಗಳಿದ್ದರೆ ಈ ಸ್ಥಿತಿ ಬರದು ಎಂದು ಮನವರಿಕೆ ಮಾಡಿದರು.

### ವಿದ್ಯಾರ್ಥಿ–ಪಾಲಕರಿಗೆ ಒತ್ತಡ ಸಲ್ಲ

ಹೆಚ್ಚಿನ ಮೊತ್ತದಲ್ಲಿ ಶಾಲಾ ಸಮವಸ್ತ್ರ, ಶ್ಯೂ ಮತ್ತು ಇನ್ನೀತರ ವಸ್ತುಗಳನ್ನು ಇಂತಂದ್ದೆ ಅಂಗಡಿಯಲ್ಲಿ ಖರೀದಿಸಬೇಕು ಎಂಬುದಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳಿಗೆ ಮತ್ತು ಅವರ ಪಾಲಕರಿಗೆ ಅನಗತ್ಯ ಒತ್ತಡ ಹಾಕುವುದು ಕಂಡುಬಂದಲ್ಲಿ ಸಹ ಮುಲಾಜಿಲ್ಲದೇ ಕ್ರಿಮಿನಲ್ ಮೊಕದ್ದಮೆ ಹೂಡುವುದಾಗಿ ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

# ಆತ್ಮಹತ್ಯೆ ನಿರ್ಧಾರ ಪ್ರಕೃತಿಗೆ ವಿರುದ್ಧ

### ನ್ಯಾ. ಅಬ್ದುಲ್ ರಹೀಮಾನ ಎ.ನಂದಗಡಿ ಹೇಳಿಕೆ | ತಾಳ್ಮೆ ಸಹನೆಯಿಂದ ಪರಿಹಾರ ಸಾಧ್ಯ




**ಹಂಪಿ ಟೈಮ್ಸ್ ಹೊಸಪೇಟೆ**

ಹುಟ್ಟು, ಸಾವು ಪ್ರಕೃತಿಗೆ ಸಂಬಂಧಿಸಿದ್ದು. ಅದನ್ನು ತಿಳಿಯಲು ನಮಗೆ ಸಾಧ್ಯವಿಲ್ಲ. ಆದರೆ, ಆತ್ಮಹತ್ಯೆ ಮಾಡಿಕೊಳ್ಳುವುದು ಪ್ರಕೃತಿಗೆ ವಿರುದ್ಧವಾದುದಾಗಿದೆ ಎಂದು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ ಎ.ನಂದಗಡಿ ಅವರು ಹೇಳಿದರು.

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹೊಸಪೇಟೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸೆಪ್ಟಂಬರ್ 11 ರಂದು ಹೊಸಪೇಟೆಯ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆಯ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾನ್ಯವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಆರ್ಥಿಕ ತೊಂದರೆ ಸೇರಿದಂತೆ ಹಲವಾರು ಕಾರಣಗಳಿರುತ್ತವೆ. ಯಾವುದೇ ಸಮಸ್ಯೆ ಶಾಶ್ವತವಲ್ಲ ಎನ್ನುವ ಸರಳ ಸತ್ಯವನ್ನು ಅರಿಯಬೇಕು. ಎದುರಾದ ಸಮಸ್ಯೆಗಳ ಬಗ್ಗೆ ಸ್ನೇಹಿತರ ಜೊತೆ, ಸಂಬಂಧಿಕರ ಜೊತೆ ಹೇಳಿಕೊಂಡಾಗ ಕೆಲವು ಸಲಹೆಗಳು ಸಿಗುತ್ತವೆ. ಏಕೆಂದರೆ ಒಬ್ಬ ವ್ಯಕ್ತಿಯ ಆಲೋಚನೆಯು ಮತ್ತೊಬ್ಬ ವ್ಯಕ್ತಿಯ ಆಲೋಚನೆಗಿಂತ ವಿಭಿನ್ನವಾಗಿರುತ್ತದೆ ಎಂದು ತಿಳಿಸಿದರು.

ಯುವಜನರು ನಮ್ಮ ದೇಶದ ಶಕ್ತಿ. ಅವರಿಂದ ಮುಂದಿನ ದಿನಗಳಲ್ಲಿ ನಮ್ಮ ದೇಶ ಅಭಿವೃದ್ಧಿಯಾಗುತ್ತದೆ. ಭವ್ಯ ಭಾರತ ನಿರ್ಮಾಣದ ಹೊಣೆ ಯುವಕರ ಮೇಲಿದೆ. ಯುವಕರ ಜೀವನ ಹಾಳಾದರೆ ದೇಶದ ಬೆಳವಣಿಗೆಗೆ ತೊಂದರೆಯಾದಂತೆ. ಆತ್ಮಹತ್ಯೆಯಿಂದ ನಿಮ್ಮ ಜೀವನದ ಜೊತೆ ನಿಮ್ಮ ಕುಟುಂಬದ ನೆಮ್ಮದಿಯನ್ನು ಸಹ ಕಸಿದುಕೊಳ್ಳುತ್ತೀರಿ ಎಂದು ಎಚ್ಚರಿಕೆ ನೀಡಿದರು.

ಒಬ್ಬ ವ್ಯಕ್ತಿ ಉತ್ತಮ ಆಲೋಚನೆಗಳನ್ನು ಹೊಂದಿರಬೇಕು. ಅದನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಬೇಕು. ವಿದ್ಯಾರ್ಥಿ ಹಂತವು ಗೋಲ್ಡನ್ ಲೈಫ್‌ನಂತೆ. ಇದನ್ನು ಯಾರು ಸಹ ಹಾಳು ಮಾಡಿಕೊಳ್ಳಬಾರದು. ನಿಮ್ಮ ಸ್ನೇಹಿತರು ಜೀವನದ ಬಗ್ಗೆ ನಿರಾಸಕ್ತಿ ಹೊಂದಿದ್ದರೆ ಅದನ್ನು ಗುರುತಿಸಿ ಸರಿಪಡಿಸುವುದು ನಿಮ್ಮ ಜವಾಬ್ದಾರಿಯಾಗಿರುತ್ತದೆ. ನೀವು ಅವರ ಆಲೋಚನೆಗಳನ್ನು ಬದಲಾಯಿಸಬೇಕು. ಸ್ನೇಹಿತರು, ಫ್ಯಾಮಿಲಿ, ಶಿಕ್ಷಕರು ಸೇರಿದಂತೆ ಎಲ್ಲರೂ ನಿಮ್ಮ ಜೊತೆಗೆ ಇರುತ್ತಾರೆ. ಅವರ ಜೊತೆ ಹೆಚ್ಚಾಗಿ ನಿಮ್ಮ ಸಮಯವನ್ನು ಕಳೆಯಿರಿ ಎಂದು ಹೇಳಿದರು.

ಡಾ.ಸೋಮಶೇಖರ ಕೆ. ಅವರು ಮಾತನಾಡಿ, ಪ್ರತಿ ವರ್ಷ ವಿಶ್ವದಲ್ಲಿ 1.70 ಲಕ್ಷ ಜನರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಭಾರತದಲ್ಲಿ ಶೇ.70 ಪುರುಷರು ಹಾಗೂ ಶೇ.30 ಮಹಿಳೆಯರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಮಾನಸಿಕ ಖಿನ್ನತೆ. ಅನುವಂಶಿಕಯವಾಗಿಯೂ ಮಾನಸಿಕ ಖಿನ್ನತೆ ಬರುತ್ತದೆ. ಮಾನಸಿಕ ಖಿನ್ನತೆ >>4


HAMPI TIMES
Print & Digital Ads
Book @ Economical rates
Hosapete-Vijayanagara Dist.
ನಂ.1 ಸ್ಥಳೀಯ ದಿನಪತ್ರಿಕೆ
ಹಂಪಿ ಟೈಮ್ಸ್
ದಿನಪತ್ರಿಕೆಯಲ್ಲಿ ಜಾಹೀರಾತು ನೀಡಿ ಅತ್ಯಧಿಕ ಓದುಗರನ್ನು ತಲುಪಿ
ಲೋಕಲ್ ಜಾಹೀರಾತು ಈಗ ವಿಶ್ವವ್ಯಾಪಿ
- Recruitment job
- Tender/Notice
- Change of name
- Matrimonial
- obituary (Death announcement)
- Businesses
- Education
- Property Real Estate
- Lost and found
- Marriage Bureau
- Remembrance
- Service
- Retail/shopping
- Personnel Announcement
- Computers and Hardware
- Astrology
- Loan /Finance
- Vehicle Automobiles
- Tours and Travels

Education is the most powerful weapon which you can use to change the world - Nelson Mandela

M:94486 33038
Visit Us www.hampitimes.com/epaper.hampitimes.com
ನಮ್ಮ ಶಾಲೆ ನಮ್ಮ ದೇಗುಲ: ಸರ್ಕಾರಿ ಶಾಲೆಗಳು ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ತುಂಬುವ ಪವಿತ್ರ ಸ್ಥಳ, ಶಾಲೆಗಳ ಸ್ವಚ್ಛತೆ, ಸಂರಕ್ಷಣೆ ನಮ್ಮೆಲ್ಲರ ಹೊಣೆ. ಬನ್ನಿ ಕೈಜೋಡಿಸಿ...

## ನಾನೇ ಮುಖ್ಯಮಂತ್ರಿಯಾಗಿ ಮುಂದುವರೆಯುವುದರಲ್ಲಿ ಯಾವುದೇ ಸಂಶಯವಿಲ್ಲ - ಸಿಎಂ ಸಿದ್ದರಾಮಯ್ಯ



■ **ಹಂಪಿ ಟೈಮ್ಸ್ ಬೆಂಗಳೂರು**

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸುಮಾರು 21 ಹಗರಣಗಳು ನಡೆದಿದ್ದು, ಈ ಎಲ್ಲ ಹಗರಣಗಳ ತನಿಖೆಗೆ ತ್ವರಿತವಾಗಿ ಚಾಲನೆ ನೀಡಲು ಹಾಗೂ ಈ ಬಗ್ಗೆ ತೆಗೆದುಕೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಸಲಹೆ ನೀಡಲು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಸಚಿವಸಂಪುಟ ಉಪ ಸಮಿತಿ ರಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅರಣ್ಯಭವನದ ಬಳಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದರು. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿನ ಹಗರಣಗಳ ಕುರಿತ ತನಿಖೆಗಳ ಪ್ರಗತಿ ಹಾಗೂ ಸಮನ್ವಯ ಸಂಬಂಧ ಕ್ರಮ ವಹಿಸುವ ನಿಟ್ಟಿನಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಸಚಿವಸಂಪುಟ ಉಪಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ಸಚಿವರಾದ ಕೃಷ್ಣಭೈರೇಗೌಡ, ಪ್ರಿಯಾಂಕ ಖರ್ಗೆ, ಸಂತೋಷ್ ಲಾಡ್ ಹಾಗೂ ಎಚ್.ಕೆ.ಪಾಟೀಲ್ ರವರು ಸದಸ್ಯರಾಗಿದ್ದಾರೆ. ಸಮಿತಿಯು ವರದಿಯನ್ನು ನೀಡಲು ಒಂದರಿಂದ ಎರಡು ತಿಂಗಳ ಅವಧಿಯನ್ನು ನೀಡಲಾಗಿದೆ. ಪಿಎಸ್ ಐ ಹಗರಣ, 40% ಕಮಿಷನ್ ಹಗರಣ, ಕೋವಿಡ್ 19, ಬಿಟ್ ಕಾಯಿನ್ ಹಗರಣಗಳಿಗೆ ಮಾತ್ರ ತನಿಖಾ ಆಯೋಗಗಳನ್ನು ರಚಿಸಲಾಗಿದೆ. ಅದರಲ್ಲಿ ಕೋವಿಡ್ 19 ಬಗ್ಗೆ ತನಿಖಾ ಆಯೋಗ ಪೂರ್ವಭಾವಿ ವರದಿಯನ್ನು ನೀಡಿದ್ದು, ಅಧಿಕಾರಿಗಳ ಪರಿಶೀಲನೆಯ ನಂತರ ಈ ಬಗ್ಗೆ ಸಚಿವ ಸಂಪುಟದಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು ಎಂದರು.

**ತಪ್ಪಿತಸ್ಥರ ವಿರುದ್ಧ ಕ್ರಮ ಖಂಡಿತ :** ಸರ್ಕಾರ ತನಿಖೆಗೆ ಸೂಚಿಸುವ ಮೂಲಕ ದ್ವೇಷದ ರಾಜಕೀಯ ಮಾಡುತ್ತಿದೆ ಎಂದು ಬಿಜೆಪಿ ಆರೋಪಿಸಿರುವುದಕ್ಕೆ ಪ್ರತಿಕ್ರಿಯೆ ನೀಡಿ, ಬಿಜೆಪಿಯವರು ನನ್ನ ಮೇಲೆ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ದ್ವೇಷದ ರಾಜಕಾರಣ ಮಾಡುವುದಿಲ್ಲ. ಆದರೆ ತಪ್ಪು ಮಾಡಿದವರ ಮೇಲೆ ಖಂಡಿತ ಕ್ರಮ ಕೈಗೊಳ್ಳಲಾಗುವುದು ಎಂದರು.

**ಪಿಎಸ್ ಐ ಹಗರಣ– ಎಸ್ ಐಟಿ ಕ್ರಮಕ್ಕೆ ಸೂಚನೆ :** ಪಿಎಸ್ ಐ ಹಗರಣದ ತನಿಖೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಬಿ.ವೀರಪ್ಪ ಆಯೋಗ ವರದಿಯನ್ನು ನೀಡಿದ್ದು, ಯಾವುದೇ ಕ್ರಮವಾಗಿಲ್ಲದಿರುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ, ಈ ಹಗರಣದ ಬಗ್ಗೆ ವಿಶೇಷ ತನಿಕಾ ತಂಡ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದರು.

**ನ್ಯಾಯಾಲಯ ತೀರ್ಮಾನ ಕೈಗೊಳ್ಳಲಿದೆ:** ವಾಲ್ಮೀಕಿ ಹಗರಣಕ್ಕೆ ಸಂಬಂಧಿಸಿದಂತೆ ಎಸ್ ಐ ಟಿ ಹಾಗೂ ಕೇಂದ್ರ ಜಾರಿ ನಿರ್ದೇಶನಾಲಯದ ತನಿಖೆಗಳು ನಡೆದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ಪ್ರಕರಣದ ಬಗ್ಗೆ ಎಸ್ ಐ ಟಿಯವರೂ ತನಿಖೆ ಮಾಡಿ ಚಾರ್ಜ್ ಶೀಟ್ ಸಲ್ಲಿಸಿದ್ದು, ಈ ಬಗ್ಗೆ ನ್ಯಾಯಾಲಯ ತೀರ್ಮಾನ ಕೈಗೊಳ್ಳಲಿದೆ ಎಂದರು.

ಮುಖ್ಯಮಂತ್ರಿ ಸ್ಥಾನ ವಿಚಾರವಾಗಿ ಇತರ ಸಚಿವರು ಹೇಳಿಕೆಗಳನ್ನು ನೀಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಮುಖ್ಯಮಂತ್ರಿ ಸ್ಥಾನ ಖಾಲಿಯಿಲ್ಲದಿರುವಾಗ, ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದು ಹೇಳುತ್ತಿದ್ದಾರೆ. ನಾನೇ ಮುಖ್ಯಮಂತ್ರಿಯಾಗಿ ಮುಂದುವರೆ ಯುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ತಿಳಿಸಿದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ತೇಜಸ್ವಿಯವರ ಮಕ್ಕಳು

ನಾನು ಕುದುರೆಮುಖ ಶಿಖರದ ಚಾರಣ ಮಾಡುವಾಗ ಹಳೇ ಮೈಸೂರು ಭಾಗದಿಂದ ಬಂದ ಕೆಲವು ತರುಣರನ್ನು ಭೇಟಿಯಾದೆ. ಅವರು ವಿಶೇಷವಾದ ಟಿ–ಶರ್ಟುಗಳನ್ನು ಉಟ್ಟು ಬಂದಿದ್ದರು. ಮುಂಭಾಗದಲ್ಲಿ 'ತಿನ್ನೋಣ, ತಿರುಗೋಣ, ಹತ್ತೋಣ, ನೋಡೋಣ' ಎಂದು ಬರೆದ, ನಾಲ್ಕು ಕ್ರಿಯಾಸೂಚಕ ಶಬ್ದಗಳಿದ್ದ ಒಂದು ವೃತ್ತವಿತ್ತು. ಬೆನ್ನ ಭಾಗದಲ್ಲಿ ತೇಜಸ್ವಿಯ ಹೇಳಿಕೆಯೊಂದಿತ್ತು; "ಪ್ರಕೃತಿ ನಮ್ಮ ಬದುಕಿನ ಭಾಗವಲ್ಲ, ನಾವು ಪ್ರಕೃತಿಯ ಒಂದು ಭಾಗ."



ಇದನ್ನು ನೋಡುತ್ತ ನನಗೆ ಹಲವು ಘಟನೆಗಳು ನೆನಪಾದವು. ಮೊದಲನೆಯದಾಗಿ, ನಾನು 'ಕರ್ವಾಲೊ' ಕಾದಂಬರಿಯನ್ನು ಪಾಠ ಮಾಡುವಾಗ, ತರಗತಿಯಲ್ಲಿ ಪಿಯುಸಿ ವಿದ್ಯಾರ್ಥಿಗಳು ತೋರಿಸುತ್ತಿದ್ದ ಉತ್ಸಾಹದ ಸ್ಪಂದನೆ. ಅವರಲ್ಲಿ ಅನೇಕರು ವೈದ್ಯರೂ ಎಂಜಿನಿಯರೂ ವಕೀಲರೂ ಆದರು. ಆದರೆ, ಈಗಲೂ ಸಾಹಿತ್ಯದ ಆಸಕ್ತಿ ಉಳಿಸಿಕೊಂಡಿದ್ದಾರೆ. ತೇಜಸ್ವಿಯವರ ಅಭಿಮಾನಿಗಳಾಗಿದ್ದಾರೆ.

ಬಹಳ ಹಿಂದೆ ಕಾರಟಗಿಯಿಂದ ನನಗೆ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮಕ್ಕೆ ಆಹ್ವಾನ ಬಂದಿತ್ತು. ರಾಜ್ಯೋತ್ಸವ ಕಾರ್ಯಕ್ರಮಗಳಿಗೆ ಸಾಮಾನ್ಯವಾಗಿ ಹೋಗದ ನಾನು, ಸಂಘದ ಹೆಸರು ಕೇಳಿ ಕುತೂಹಲದಿಂದ ಹೋಗಿದ್ದೆ. ಆ ಪುಟ್ಟ ಊರಿನ ತರುಣರು ಸೇರಿ ಪೂರ್ಣಚಂದ್ರ ತೇಜಸ್ವಿ ಕನ್ನಡ ಸಂಘ ಕಟ್ಟಿಕೊಂಡಿ ದ್ದರು, ಎಲ್ಲರೂ ಸಾಹಿತ್ಯಾಸಕ್ತಿ ಬೆಳೆಸಿಕೊಂಡಿದ್ದರು. ನನ್ನ ತಮ್ಮ ಕಲೀಮುಲ್ಲಾ ಕೂಡ ಪಿಯುಸಿಯಲ್ಲಿ 'ಕರ್ವಾಲೊ' ಓದಿದವನು. ಬಳಿಕ ಅವನಿಗೆ ತೇಜಸ್ವಿ ಹುಚ್ಚು ಹಿಡಿಯಿತು. ಅವರ ಸಾಹಿತ್ಯದ ಮೇಲೆ ಪಿಎಚ್.ಡಿ., ಮಾಡಿದನು. ಅವರಂತೆಯೇ ವಿನೋದ ದಿಂದ ಕೂಡಿದ ಬರಹ ಬರೆದು ಲೇಖಕನಾದನು. ಅವರಂತೆಯೇ ವೈಲ್ಡ್ ಲೈಫ್ ಫೋಟೊಗ್ರಫಿಯಲ್ಲಿ ಆಸಕ್ತಿ ಬೆಳೆಸಿಕೊಂಡನು. ತೇಜಸ್ವಿ ಓದು ಅವನ ಬದುಕನ್ನೇ ಬದಲಿಸಿತು. ಇವತ್ತಿಗೂ ಐಟಿ–ಬಿಟಿ ಕ್ಷೇತ್ರಗಳಲ್ಲಿ ಎಂಜಿನಿಯರುಗಳಾಗಿ ದುಡಿವ ಹೊಸ ತಲೆಮಾರಿನ ಅನೇಕರು, ಬೇರಾವ ಲೇಖಕರ ಬಗ್ಗೆಯೂ ತೋರದ ಒಲವನ್ನು ತೇಜಸ್ವಿ ಬಗ್ಗೆ ಬೆಳೆಸಿಕೊಂಡಿದ್ದಾರೆ. ಪುಸ್ತಕ ಮಾರಾಟಗಾರರು ಕೂಡ , 'ಹೆಚ್ಚು ಮಾರಾಟವಾಗುವ ಪುಸ್ತಕಗಳು ತೇಜಸ್ವಿಯವರವು; ಅದರಲ್ಲೂ, ತರುಣರು ಅವನ್ನು ಖರೀದಿಸುತ್ತಾರೆ' ಎಂದು ಹೇಳುತ್ತಾರೆ.




ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಈ ಘಟನೆಗಳು ಒಂದು ಸತ್ಯವನ್ನು ಹೇಳುತ್ತವೆ. ಅದೆಂದರೆ, ತೇಜಸ್ವಿಯವರ ಬರಹ ಹೊಸ ತಲೆಮಾರಿನ ಜನತೆಗೆ ಬೇರಾವುದೇ ಲೇಖಕರಿಗಿಂತ ಹೆಚ್ಚು ಲಿಂಕ್ ಆಗಿದೆ. ಮಾತ್ರವಲ್ಲ, ಅವರ ಆಲೋಚನಾ ಕ್ರಮ, ಜೀವನ ವಿಧಾನ ಬದಲಿಸಿದೆ. ಕನ್ನಡ ಓದುಗರ ಲೋಕವನ್ನು ವಿಸ್ತರಿಸಿದೆ.

ಪ್ರಶ್ನೆಯೆಂದರೆ, ಹೊಸ ತಲೆಮಾರನ್ನು, ಅದರಲ್ಲೂ ತರುಣರನ್ನು ತೇಜಸ್ವಿ ಹೇಗೆ ಮತ್ತು ಯಾಕಾಗಿ ಆವರಿಸಿಕೊಂಡರು? ಜಾತಿ ವಿನಾಶದ ಬಗ್ಗೆ ಆಸ್ಥೆಯುಳ್ಳ, ಸಮಾಜವಾದಿ, ರೈತ ಚಳವಳಿ ಪರವಾದ, ನವ್ಯ ಸಾಹಿತ್ಯದ ಆಯಾಮ ಹಾಗೂ ಕಮ್ಯುನಿಸಂ ವಿರೋಧವುಳ್ಳ ಲೇಖಕನೊಬ್ಬನನ್ನು ಈ ತರುಣರು ಪರಿಸರದ ವಿಷಯದಲ್ಲಿ ಮಾತ್ರ ಹೇಗೆ ಸ್ವೀಕರಿಸಿದರು? ಇದರ ಉತ್ತರ, ಪರಿಸರದ ಜೊತೆಗಿನ ಸಂಬಂಧಕ್ಕಾಗಿ ಮನೆ ಬಿಟ್ಟು ಹೊರಬರಬೇಕು ಮತ್ತು ಕಾಡುಮೇಡುಗಳನ್ನು ಅಲೆಯಬೇಕು. ಇದು ಕೆಲ ಮಟ್ಟಿಗೆ ಜಾತ್ಯತೀತ ಗುಣವನ್ನೂ ಪ್ರೇರಿಸುತ್ತದೆ. ಗಂಡು–ಹೆಣ್ಣಿನ ಪ್ರೇಮವನ್ನೂ ಬಂಡುಕೋರತನವಾಗಿ ಕಾಣಿಸುತ್ತದೆ.ಸಿದ್ಧಾಂತ, ಪರಂಪರೆ, ಸಂಸ್ಕೃತಿ, ಧರ್ಮಗಳ ಹೆಸರಲ್ಲಿ ಹೊಸ ತಲೆಮಾರನ್ನು ಶ್ರದ್ಧೆ, ನಿಷ್ಠೆ, ವಿಧೇಯತೆಗೆ ಪ್ರೇರೇಪಿಸುವ ಬರಹಕ್ಕಿಂತ; ನಿರಂಕುಶಮತಿಗಳಾಗಿ ತಿರುಗುವ, ಜೀವನವನ್ನು ಎಂಜಾಯ್ ಮಾಡುವ, ಪ್ರೇಮಿಸುವ ಕಾರ್ಯಗಳನ್ನು, ಹಳೇ ಸಮಾಜದ ವಿರುದ್ಧ ದಂಗೆಯೇಳುವ ಮತ್ತು ಹೊಸ ಸಮಾಜದ ಕನಸನ್ನು ಕಾಣುವ ಪರಿಕಲ್ಪನೆಯನ್ನು ಅದು ಮುಂದಿಟ್ಟಿತು. ಯಾವುದೇ ಚಳವಳಿಯ ಭಾಗವಾಗುವುದಕ್ಕಿಂತ, ವೈಯಕ್ತಿಕ ನೆಲೆಯಲ್ಲಿ ಅರಾಜಕತೆಗೆ ಹತ್ತಿರವಾದ ಸ್ವಚ್ಛಂದತೆಯಲ್ಲಿ ವಿಹರಿಸಲು ಪ್ರೇರೇಪಿಸಿತು. ಇದರಲ್ಲಿ ಕಾಡು ತಿರುಗುವುದೂ ಒಂದು. 20ರ ಹರೆಯದ, ಬಿ.ಎ ಫೇಲಾದ ಹಾಸನ ಭಾಗದ ಹುಡುಗನೊಬ್ಬ ಧರಿಸಿದ ಟೀಶರ್ಟ್ ಬರಹವು ಇದರ ಭಾಗವಾಗಿ ಒಡಮೂಡಿದೆಯೇ?



ತೇಜಸ್ವಿ ಈ ಕಾರಣಕ್ಕೆ ತತ್ವಶಾಸ್ತ್ರೀಯ ಚಿಂತನೆಯನ್ನು ಮಾಡಬಲ್ಲ ಗಂಭೀರ ಓದುಗರ ಲೇಖಕರೂ ಹೌದು; ಅಷ್ಟು ಗಂಭಿರವಲ್ಲದ, ಆದರೆ ಸಾಂಪ್ರದಾಯಿಕ ನಿಯಮ ಮುರಿಯುತ್ತ ತಮಗೆ ಬೇಕಾದಂತೆ ಬದುಕಲು ಯತ್ನಿಸುವ ಹೊಸ ತಲೆಮಾರಿನ ಲೇಖಕರೂ ಹೌದು. ತೇಜಸ್ವಿ ಬರಹಗಳನ್ನು ಅತಿ ಹೆಚ್ಚು ಬಳಸಿಕೊಂಡಿರುವುದು ಅರಣ್ಯ ಇಲಾಖೆ. ನೇಚರ್ ಕ್ಯಾಂಪುಗಳಲ್ಲಿ, ಚಾರಣ ಮಾಡುವ ಜಾಗಗಳಲ್ಲಿ ತೇಜಸ್ವಿ ಬರಹದ ಸಾಲುಗಳನ್ನು ನೋಡಬಹುದು. ಕನ್ನಡದ ಗಂಭೀರ ಲೇಖಕರಲ್ಲಿ ಹೀಗೆ ಹಲವು ಸ್ತರಗಳಿಗೆ ಹರಿದುಹೋದ ಲೇಖಕರು ಬಹಳ ಕಡಿಮೆ. (ಹಳೆಯ ಟಿಪ್ಪಣಿ)



# ಸಿರಿಧಾನ್ಯ ಮೌಲ್ಯವರ್ಧನೆ ಘಟಕಗಳ ಉದ್ಘಾಟನೆ

## ಸೌರಶಕ್ತಿ ಚಾಲಿತ ಈರುಳ್ಳಿ ಸಂಗ್ರಹಣೆ ಒಣಗಿಸುವ ಘಟಕ

■ **ಹಂಪಿ ಟೈಮ್ಸ್ ಕೊಪ್ಪಳ**

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಕೊಪ್ಪಳ, ಐ.ಸಿ.ಐ.ಸಿ.ಐ. ಫೌಂಡೇಶನ್ ಬೆಂಗಳೂರು, ಭಾರತೀಯ ಸಿರಿಧಾನ್ಯ ಸಂಶೋಧನಾ ಸಂಸ್ಥೆ ಹೈದರಾಬಾದ್ ಹಾಗೂ ಕುಕನೂರು ಧರಣಿ ಸಿರಿಧಾನ್ಯ ಉತ್ಪಾದಕರ ಕಂಪನಿ ಕುದರಿಮೋತಿ ಇವರ ಸಹಯೋಗದಲ್ಲಿ "ಸೌರಶಕ್ತಿ ಚಾಲಿತ ಈರುಳ್ಳಿ ಸಂಗ್ರಹಣೆ ಮತ್ತು ಒಣಗಿಸುವ ಘಟಕ ಹಾಗೂ ಸಿರಿಧಾನ್ಯಗಳಮೌಲ್ಯವರ್ಧನೆಗೊಳಿಸುವ ಘಟಕಗಳ ಉದ್ಘಾಟನಾ ಕಾರ್ಯಕ್ರಮ"ವು ಸೆಪ್ಟೆಂಬರ್ 10ರಂದು ಕುಕನೂರು ತಾಲ್ಲೂಕಿನ ಕುದರಿಮೋತಿ ಗ್ರಾಮದಲ್ಲಿ ನೆಡೆಯಿತು.



ಸೌರಶಕ್ತಿ ಚಾಲಿತ ಈರುಳ್ಳಿ ಸಂಗ್ರಹಣೆ ಮತ್ತು ಒಣಗಿಸುವ ಘಟಕ ಹಾಗೂ ಸಿರಿಧಾನ್ಯಗಳಮೌಲ್ಯವರ್ಧನೆಗೊಳಿಸುವ ಘಟಕಗಳನ್ನು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ರೈತರು ಆದಾಯವನ್ನು ಹೆಚ್ಚಿಸಿಕೊಳ್ಳಲು ದ್ವಿತೀಯ ಕೃಷಿಯನ್ನು ಹೆಚ್ಚಾಗಿ ಅವಲಂಬಿಸಬೇಕು. ಕೃಷಿ ಉದ್ಯೋಗ ವಾಗದೆ ಉದ್ಯಮ ವಾಗಬೇಕೆಂದು ಎಂದರು. ಗ್ರಾಮಕ್ಕೆ ರೂ.50 ಲಕ್ಷ ವೆಚ್ಚದಲ್ಲಿ ಪಶು ಆಸ್ಪತ್ರೆಯನ್ನು ಈಗಾಗಲೇ ಮಂಜೂರಾತಿಯಾಗಿದ್ದು, ರೈತ ಭವನಕ್ಕೆ ಬೇಕಾಗುವ ಜಮೀನನ್ನು ನೀಡಿದ್ದಲ್ಲಿ ಆದಷ್ಟು ಬೇಗ ನಿರ್ಮಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ರೈತರಿಗೆ ನೀರಾವರಿಗೆ ಬೇಕಾಗುವ ಕೆರೆಗಳು ಯಲಬುರ್ಗಾ ಮತ್ತು ಕುಕನೂರು ತಾಲ್ಲೂಕುಗಳಿಗೆ ಮಂಜೂರಾತಿಯಾಗಿದ್ದು, ಮುಂದಿನ ದಿನಗಳಲ್ಲಿ 1100 ಎಕರೆಗಳಿಗೆ ಅನುಕೂಲವಾಗುವುದು. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಕಾರ್ಯವನ್ನು ರಾಯರಡ್ಡಿಯವರು ಪ್ರಶಂಸಿ, ಇನ್ನೂ ಹೆಚ್ಚಿನ ಸಂಶೋಧನಾ ಕಾರ್ಯವನ್ನು ಮಾಡುವಂತೆ ತಿಳಿಸಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿದ್ದ ಕುದರಿಮೋತಿ ಮೈಸೂರು ಮಠದ ಶ್ರೀ ವಿಜಯಮಹಾಂತ ಮಹಾಸ್ವಾಮಿಗಳು ಮಾತನಾಡಿ, ಸಿರಿಧಾನ್ಯಗಳನ್ನು ದಿನನಿತ್ಯ ಆಹಾರದಲ್ಲಿ ಹೆಚ್ಚುಹೆಚ್ಚಾಗಿ ಉಪಯೋಗಿಸಿ ಆರೋಗ್ಯವನ್ನುಕಾಪಾಡಿಕೊಳ್ಳಬೇಕೆಂದು ತಿಳಿಸಿದರು.

ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಪ್ರಾಧ್ಯಾಪಕರು ಹಾಗೂ ವಿಸ್ತರಣಾ ಮುಂದಾಳುಗಳಾದ ಡಾ ಎಂ.ವಿ.ರವಿ ಅವರು ಮಾತನಾಡಿ, ಸೌರಶಕ್ತಿ ಚಾಲಿತ ಈರುಳ್ಳಿ ಸಂಗ್ರಹಣೆ ಮತ್ತು ಒಣಗಿಸುವ ಘಟಕ ಹಾಗೂ ಸಿರಿಧಾನ್ಯಗಳಮೌಲ್ಯವರ್ಧನೆಗೊಳಿಸುವ ಘಟಕಗಳನ್ನು ಉಪಯೋಗಿಸಿಕೊಂಡು, ಮುಂದಿನ ದಿವಸಗಳಲ್ಲಿ ರೈತರು ಆರ್ಥಿಕವಾಗಿ ಸಧೃಢವಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್., ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಕೃಷ್ಣ ಉಕ್ಕುಂದ, ಯಲಬುರ್ಗಾದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಲಿಂಗನಗೌಡ ಪಾಟೀಲ, ಬೆಂಗಳೂರು ಐ.ಸಿ.ಐ.ಸಿ.ಐ. ಫೌಂಡೇಶನ್ ಯೋಜನಾ ವ್ಯವಸ್ಥಾಪಕ ವೇಣು ಗೋಪಾಲ ರಾವ್, ಎಫ್.ಪಿ.ಓ. ಸಂಯೋಜಕ ಅಶೋಕ ಸಜ್ಜನ್, ಕೊಪ್ಪಳ ಹಾಪ್‌ಕಾಮ್ಸ್ ಸಂಸ್ಥೆಯ ಅಧ್ಯಕ್ಷರಾದ ಯಂಕಣ್ಣಾ ಯರಾಶಿ, ಕ್ಷೇತ್ರ ಅಧೀಕ್ಷಕರಾದ ಡಾ. ಹನುಮಂತಪ್ಪ ದಾಸನಳ್ಳಿ, ಕುಕನೂರು ಧರಣಿ ಸಿರಿಧಾನ್ಯ ಉತ್ಪಾದಕರ ಕಂಪನಿ ಕುದರಿಮೋತಿ ಅಧ್ಯಕ್ಷರಾದ ಫಕೀರಪ್ಪ ಲಿಂಗದಳ್ಳಿ ಸೇರಿದಂತೆ ಕುದರೆಮೋತಿ ಗ್ರಾ.ಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಗ್ರಾಮದ ಪ್ರಗತಿಪರ ರೈತರು ರೈತ ಮಹಿಳೆಯರು ಉಪಸ್ಥಿತರಿದ್ದರು.

# ಮಕ್ಕಳಿಗೆ ಜಿಲ್ಲಾ ಮಟ್ಟದ ಪ್ರಶಸ್ತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿರುವಂತಹ ಮಕ್ಕಳಿಗೆ ಪ್ರೋತ್ಸಾಹಿಸಲು ಜಿಲ್ಲಾ ಮಟ್ಟದ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್ ಅವರು ತಿಳಿಸಿದ್ದಾರೆ.

ನಾವೀನ್ಯತೆ, ತಾರ್ಕಿಕ ಸಾಧನೆಗಳು (ಉದಾ: ಎರಡು ಅನುಕ್ರಮ ವರ್ಷಗಳಲ್ಲಿ ಗಣಿತಶಾಸ್ತ್ರದಲ್ಲಿ ಮೊದಲನೇ ಸ್ಥಾನ) ಕ್ರೀಡೆ, ಕಲೆ, ಸಾಂಸ್ಕೃತಿಕ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿರುವ 5 ರಿಂದ 18 ವರ್ಷದೊಳಗಿನ ವಯೋಮಿತಿ ಒಳಗಿರುವ ಮಕ್ಕಳನ್ನು ಆಯ್ಕೆ ಮಾಡಲಾಗುವುದು. ಈ ಜಿಲ್ಲಾ ಮಟ್ಟದ ಪ್ರಶಸ್ತಿಯು ರೂ. 10,000 ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**ಷರತ್ತು:** 5 ರಿಂದ 18 ವರ್ಷ ವಯೋಮಿತಿ ಹೊಂದಿರಬೇಕು, ವಯಸ್ಸಿನ ಬಗ್ಗೆ ಜನನ ಪ್ರಮಾಣ ಪತ್ರ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಣ ಮಾಡಿಸಿದ ಪತಿ ಲಗತ್ತಿಸಬೇಕು. ಪ್ರತಿಭೆಯನ್ನು ಹೊಂದಿರುವ ಬಗ್ಗೆ ಪ್ರಮುಖ ದಿನಪ್ರತಿಕೆಯಲ್ಲಿ ಪ್ರಕಟಗೊಂಡಿರುವ ಪತ್ರಿಕೆ ತುಣುಕು/ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು.

ಅಂತರಾಷ್ಟ್ರೀಯ, ರಾಷ್ಟ್ರೀಯ ರಾಜ್ಯ ಮಟ್ಟದಲ್ಲಿ ಭಾಗವಹಿಸಿರುವ ಪ್ರಶಸ್ತಿ ಪಡೆದಿರುವ ಮಾಹಿತಿ. ಹಿಂದಿನ ವರ್ಷಗಳಲ್ಲಿ ಯಾವುದೇ ಕ್ಷೇತ್ರದಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ ಪಡೆದ ಮಕ್ಕಳಿಗೆ ಪುನಃ ಪ್ರಶಸ್ತಿ ನೀಡಲು ಅವಕಾಶವಿರುವುದಿಲ್ಲ. ಅರ್ಜಿದಾರರು ಬಳ್ಳಾರಿ ಜಿಲ್ಲೆಯಲ್ಲಿ ನೆಲಸಿರಬೇಕು. ಸಾಧಿಸಿರುವ ಪ್ರತಿಭೆಯನ್ನು ಸಮರ್ಥಿಸಲು ಪೂರಕ ದಾಖಲಾತಿಗಳನ್ನು ಸಲ್ಲಿಸಬೇಕು.

ಪ್ರಸ್ತಕ ವರ್ಷದ ಪ್ರಶಸ್ತಿಗೆ ನಿಗದಿಪಡಿಸಿದ ಅರ್ಜಿ ನಮೂನೆಗಳನ್ನು ಜಿಲ್ಲೆಯ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಳ್ಳಾರಿ ಇವರಿಂದ ಪಡೆದು ಕನ್ನಡ ಭಾಷೆಯಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿದ ದಿನ ಸೆ.30 ಒಳಗೆ ಇದೇ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ನಗರದ ಎಸ್.ಪಿ. ವೃತ್ತದ ಬಳಿಯ ದೇವಿನಗರದ ಸ್ತ್ರೀ ಸೇವಾನಿಕೇತನ ಆವರಣದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ದೂ.08392–266219 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ಕವಿ ಮನಸು

### ಕಾಲ ಚಕ್ರ ತಿರುಗಿದೆ



ಕೊರಗಿ ಕೊರಗಿ ಮರುಗದಿರು
ತೀರಲಾಗದ ಆಸೆಗಳಿಗೆ
ಇರುವುದರಲ್ಲಿ ಸಂತಸದಿಂದಿರು
ಬರುವುದೆಲ್ಲ ಶುಭಘಳಿಗೆ

ನಾಕ ನರಕ ಎಲ್ಲೂ ಇಲ್ಲ
ಎಲ್ಲ ನಿನ್ನ ಕೈಲಿದೆ
ನಾಕು ಜನರಿಗೆ ಒಳಿತು ಮಾಡೆ
ನಾಕ ನಿನ್ನ ಮುಂದಿದೆ

ನಾನು ನಾನೆಂಬ ಹಮ್ಮಿಗೆ
ಲೋಕ ನರಕ ಕಂಡಿದೆ
ನಾ ಎಂಬುದ ಬಿಟ್ಟು ನೋಡು
ನಾಕ ನಿನ್ನ ಮುಂದಿದೆ

ಹಗಲು ಇರುಳು ಮರಗಳೆಲ್ಲ
ನಿಸ್ವಾರ್ಥದಿ ಫಲ ನೀಡಿವೆ
ಹೇಳು ಮನುಜ ಪರಿಸರಕೆ
ಸ್ವಾರ್ಥ ಎಂಬುದು ಎಲ್ಲಿದೆ

ಕಷ್ಟ ಸುಖಗಳು ಬಾಳಿನಲ್ಲಿ
ಬದುಕು ಬಂಡಿ ಚಕ್ರಗಳಾಗಿದೆ
ಹಗಲು ಸೂರ್ಯ ರಾತ್ರಿ ಚಂದ್ರ
ಸಂಚಾರ ಕಾಲಚಕ್ರವಾಗಿದೆ

– ಕೆ ಎಂ ಬಸವರಾಜ ಹೊಸಪೇಟೆ

### ತಪ್ಪು ಒಪ್ಪುಗಳಿರಬಹುದು

ಬರೆದ ಕವನಕೆ ನೆಲೆಯು ಸಿಗುವುದು
ಮಧುರವಾಗಿಹ ಕೊರಳಲಿ
ಕವಿತೆ ಜೀವವ ತಳೆದು ನಿಲುವುದು
ಕೇಳಿ ಸುಖಿಸುವ ಮನದಲಿ

ಸಾಲು ಸಾಲಿನ ಭಾವಕೊಪ್ಪುವ
ಮನವ ಸೆಳೆಯುವ ಗಾಯನ
ಏರು ಇಳಿತದ ಸ್ವರದ ನರ್ತನ
ಕೇಳಿ ವಿಸ್ಮಯವೀಮನ

ಮಾತೆ ಶಾರದೆ ಹರಸಬೇಕಿದೆ
ಸಕಲ ವಿದ್ಯೆಯ ದೇವತೆ
ವಾಣಿ ಒಲಿಯುತ ಹರಸಲಾಕೆಯು
ಶ್ರದ್ಧೆ ಭಕ್ತಿಗೆ ಆದ್ಯತೆ

ಬರೆದ ಸಾಲನು ಬಳಗದೊಳಗಡೆ
ಹಾಕಿ ಬಿಟ್ಟರೆ ನೆಮ್ಮದಿ
ಓದಿ ಬರಹವ ತಪ್ಪು ಒಪ್ಪನು
ಅರುಹಲೆನ್ನುವ ತವಕದಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಕೈಗೂಡದ ಕನಸು

ಬದುಕು ಒಂದು ಅಗಾಧ ಕಡಲು
ನನ್ನ ಪಾಲಿಗಿಲ್ಲ ಅಮ್ಮನ ಮಡಿಲು
ಬರಿದಾಗಿದೆ ಇಲ್ಲಿ ಪ್ರೀತಿಯ ಒಡಲು
ಅಮ್ಮನಿರದ ನೋವು ಅನುಕ್ಷಣ ಸುಡಲು

ನಿನ್ನ ನೋಡಿದ ನೆನಪು ನನ್ನ ಬುದ್ಧಿಗಿಲ್ಲ
ನೀನಿಲ್ಲದ ಈ ಬಾಲ್ಯ ನನಗಂತೂ ಸಲ್ಲ
ಚಿತ್ತಾರದಲಿ ನಿನ್ನ ಒಡಲೊಳಗೆ ಮಲಗಿಹೆ
ನಿನ್ನ ಜೊತೆಗಿರುವೆನೆಂಬ ಕನಸ ಮನದಲ್ಲೇ
ಪೊರೆದಿದೆ

ಇರಲಿ ನನಗೆ ಮುಂದೆ ಮತ್ತೊಂದು ಜನ್ಮ
ಆ ಜನುಮದಲ್ಲಿ ನೀ ನನ್ನ ಜೊತೆಗಿರು ಅಮ್ಮ
ನೀನಿರದ ಈ ಬದುಕು ಬಹುತೇಕ ಖಾಲಿ
ತಬ್ಬಿ ಸಂತೈಸಿ ಮಲಗಿಸುತ ಹಾಡು ನೀ ಲಾಲಿ

– ಚೇತನ ಭಾರ್ಗವ ಬೆಂಗಳೂರು

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಬಾಲಕ ನಚಿಕೇತ ಮತ್ತು ಯಮ

ಉದ್ದಾಲಕ (ಯಜಶ್ರವಸ ಎಂಬ ಹೆಸರು ಕೂಡ ಇದೆ) ಎಂಬ ಮಹರ್ಷಿಯು ಅತ್ಯಂತ ಪ್ರಸಿದ್ಧ ಋಷಿಯಾಗಿದ್ದನು. ನಚಿಕೇತ ಎಂಬ ಪುತ್ರನನ್ನು ಹೊಂದಿದ್ದ ಉದ್ಧಾಲಕ ಮಹರ್ಷಿಯು ಆತನಿಗೆ ಸರ್ವ ವಿದ್ಯೆಗಳನ್ನು ಧಾರೆ ಎರೆದಿದ್ದನು. ಅತ್ಯಂತ ಸ್ಪಷ್ಟವಾಗಿ ಮಂತ್ರಗಳನ್ನು ಉಚ್ಚರಿಸುತ್ತಿದ್ದ ಬಾಲಕ ನಚಿಕೇತ ಶಾಸ್ತ್ರ, ಪುರಾಣ ಮತ್ತು ವೇದಗಳಲ್ಲಿ ಪಾರಂಗತನಾಗಿದ್ದನು. ಇದರ ಜೊತೆಗೆ ನಯ ವಿನಯ ಮತ್ತು ದೃಢತೆಗೆ ಮತ್ತೊಂದು ಹೆಸರಾಗಿದ್ದ ಬಾಲಕ ನಚಿಕೇತ ಸುತ್ತಲ ಆಶ್ರಮವಾಸಿಗಳಲ್ಲಿ ಅತ್ಯಂತ ಪ್ರೀತಿ ಪಾತ್ರನಾಗಿದ್ದನು.

ಒಂದು ಬಾರಿ ಆತನ ತಂದೆ ಅತಿ ದೊಡ್ಡ ಯಜ್ಞವೊಂದನ್ನು ಆಯೋಜಿಸಿದನು. ದೇಶದ ಮೂಲೆ ಮೂಲೆಯಲ್ಲಿರುವ ಸಂತರು, ಸನ್ಯಾಸಿಗಳು, ಮಹಾಋಷಿಗಳಿಗೆ ಆಮಂತ್ರಣ ನೀಡಲಾಯಿತು. ನ ಭೂತೋ,ನ ಭವಿಷ್ಯತಿ ಎಂಬಂತೆ ನಡೆದ ಆ ಯಜ್ಞವನ್ನು ವೀಕ್ಷಿಸಲು ಸಹಸ್ರಾರು ಜನ ಭಕ್ತರು ಕೂಡ ಬಂದು ನೆರೆಯುತ್ತಿದ್ದರು. ಹಲವಾರು ದಿನಗಳವರೆಗೆ ನಡೆದ ಈ ಯಜ್ಞವನ್ನು ನೆರವೇರಿಸಿ ಕೊಡುತ್ತಿದ್ದ ಋತ್ವಿಜರು ತಪ್ಪು ತಪ್ಪಾಗಿ ಮಂತ್ರಗಳನ್ನು ಉಚ್ಚರಿಸುತ್ತಿದ್ದುದನ್ನು ಕಂಡು ಬಾಲಕ ನಚಿಕೇತ ಕಸಿವಿಸಿಗೊಂಡನು.

ಋತ್ವಿಜರನ್ನು ಅವರು ಮಾಡುತ್ತಿರುವ ತಪ್ಪಿಗೆ ತಡೆಗಟ್ಟಬೇಕೆಂದು ಹಲವಾರು ಬಾರಿ ತೋರಿದರೂ ಕೂಡ ತಮ್ಮ ಆಶ್ರಮದ ಯಜ್ಞ ಕಾರ್ಯವನ್ನು ನೆರವೇರಿಸಿಕೊಡಲು ಬಂದಿರುವ ಋತ್ವಿಜರನ್ನು ಅವಮಾನಿಸಿದಂತೆ ಆದೀತೆಂದು ಭಾವಿಸಿದ ಬಾಲಕ ನಚಿಕೇತ ತಂದೆಗೆ ಈ ವಿಷಯವನ್ನು ಅರುಹಿದರಾಯಿತು ಎಂದು ತನ್ನ ತಂದೆ ಯಜ್ಞ ಮಾಡುತ್ತಿದ್ದ ಯಜ್ಞ ಶಾಲೆಗೆ ಬಂದನು.

ಅಲ್ಲಿ ಯಾಗಕ್ಕೆ ಬಂದ ಬ್ರಾಹ್ಮಣರೆಲ್ಲರಿಗೂ ಉದ್ದಾಲಕ ಮುನಿಯು ಸಾವಿರಾರು ಗೋವುಗಳನ್ನು ದಾನವಾಗಿ ನೀಡುತ್ತಿದ್ದನು. ಒಂದು ಬಾರಿ ಆ ಎಲ್ಲ ಬಡಕಲಾದ ಗೋವುಗಳನ್ನು ವೀಕ್ಷಿಸಿದ ನಚಿಕೇತನಿಗೆ ತನ್ನ ತಂದೆ ವೃದ್ಧ ಮತ್ತು ಅಶಕ್ತವಾದ ಗೋವುಗಳನ್ನು ದಾನವಾಗಿ ನೀಡುತ್ತಿರುವುದು ಸರಿ ಕಾಣಲಿಲ್ಲ. ಅಂತೆಯೇ ಯಾಗದಲ್ಲಿ ನಿರತನಾದ ತಂದೆಯನ್ನು ಪದೇ ಪದೇ ಮಾತನಾಡಿಸಿ ಆತನ ಲಕ್ಷ್ಯವನ್ನು ಸೆಳೆಯಲು ಪ್ರಯತ್ನಿಸಿ ಯಶಸ್ವಿಯಾದ. ಯಾಗದ ನಡುವೆ ತನ್ನತ್ತ ನೋಡಿದ ತಂದೆಗೆ "ಈ ಗೋವುಗಳನ್ನು ಯಾರಿಗೆ ಕೊಡುತ್ತಿರುವಿರಿ?" ಎಂದು ತಂದೆಯನ್ನು ಪ್ರಶ್ನಿಸಿದ.

'ಬಡ ಬ್ರಾಹ್ಮಣರಿಗೆ' ಎಂದು ತಂದೆ ತುಸು ಸಿಡಿಮಿಡಿಯಿಂದಲೇ ಉತ್ತರಿಸಿದ. "ನಿಮ್ಮೆಲ್ಲ ಸಾಧನೆಗಳನ್ನು, ಬಿರುದು ಬಾವಲಿಗಳನ್ನು ಯಾರಿಗೆ ದಾನವಾಗಿ ಕೊಡುವೆ ತಂದೆಯೇ? ಎಂದು ಕೇಳಿದ ನಚಿಕೇತನ ಪ್ರಶ್ನೆಗೆ ತುಸು ಕೋಪದಿಂದ 'ಋಷಿಮುನಿಗಳಿಗೆ' ಎಂದು ಉತ್ತರಿಸಿದ ಆತನ ತಂದೆ. ಮತ್ತೆ ಪುಟ್ಟ ನಚಿಕೇತ "ಹಾಗಾದರೆ, ನನ್ನನ್ನು ಯಾರಿಗೆ ದಾನವಾಗಿ ಕೊಡುವೆ? ಎಂದು ಕೇಳಿದಾಗ ಪದೇಪದೇ ತನ್ನ ಕಾರ್ಯಕ್ಕೆ ಅಡ್ಡಿ ಮಾಡುತ್ತಿದ್ದ ನಚಿಕೇತನನ್ನು ಕುರಿತು ಸಿಟ್ಟಿನಿಂದ "ನಿನ್ನನ್ನು ಯಮನಿಗೆ ದಾನ ಕೊಡುವೆ" ಎಂದು ಕೋಪದ ಭರದಲ್ಲಿ ಹೇಳಿದ ಆ ಮುನಿವರ. ತಂದೆಯ ಮಾತನ್ನು ಕೇಳಿದ ನಚಿಕೇತ ತಂದೆಗೆ ತಲೆಬಾಗಿದ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಮುಂದಿನ ಹಂತದಲ್ಲಿ ಸಶರೀರನಾಗಿ ನಚಿಕೇತ ಯಮಧರ್ಮರಾಯನ ಆಸ್ಥಾನದ ಬಾಗಿಲು ತಟ್ಟಿದ. ಯಮಧರ್ಮರಾಯ ಮನೆಯಲ್ಲಿಲ್ಲದ ಕಾರಣ ಯಮದೂತರು ಪುಟ್ಟ ಬಾಲಕ ನಚಿಕೇತನನ್ನು ಯಮಲೋಕದ ಬಾಗಿಲಲ್ಲಿಯೇ ತಡೆದು ನಿಲ್ಲಿಸಿದರು. ಮೂರು ಹಗಲು ಮತ್ತು ಮೂರು ರಾತ್ರಿ ನೀರು, ಆಹಾರಗಳಿಲ್ಲದೆ ಯಮಲೋಕದ ಬಾಗಿಲಲ್ಲಿಯೇ ಕಳೆದನು ಆ ಪುಟ್ಟ ಬಾಲಕ.

ಮೂರನೆಯ ದಿನ ಮುಂಜಾನೆ ತನ್ನ ಲೋಕಕ್ಕೆ ಮರಳಿದ ಯಮಧರ್ಮರಾಯನು ಪುಟ್ಟ ಬಾಲಕನನ್ನು ಅಲ್ಲಿ ನೋಡಿ ಹುಬ್ಬೇರಿಸಿದರೂ ತನ್ನ ದಿವ್ಯ ದೃಷ್ಟಿಯಿಂದ ನಡೆದ ವಿದ್ಯಮಾನಗಳನ್ನು ಅರಿತನು. ಬ್ರಾಹ್ಮಣ ಬಾಲಕನನ್ನು ಮೂರು ದಿನಗಳ ಕಾಲ ಯಮಲೋಕದ ಹೊರಗೆ ನಿಲ್ಲಿಸಿದ ಪಾಪದ ಪಶ್ಚಾತಾಪವಾಗಿ ಯಮಧರ್ಮನು ಆ ಬಾಲಕನನ್ನು ಕುರಿತು ಮೂರು ವರಗಳನ್ನು ಕೇಳಲು ಹೇಳಿದನು.

ತನ್ನ ತಂದೆಯ ಕೋಪ ಶಾಂತವಾಗಲು, ನನ್ನ ತಂದೆ ತನ್ನೊಂದಿಗೆ ಮೊದಲಿನಂತೆಯೇ ಪ್ರೀತಿಯಿಂದ ವ್ಯವಹರಿಸಲು ಸಾಧ್ಯವಾಗುವಂತೆ ವರವನ್ನು ಕೊಡಲು ಯಮಧರ್ಮರಾಯನನ್ನು ಕೋರಿಕೊಂಡ ಬಾಲಕ ನಚಿಕೇತ. ಯಮನಿಗೆ ಆಶ್ಚರ್ಯವಾಯಿತು. ಮೊದಲೆರಡು ವರಗಳಿಗೆ ತಥಾಸ್ತು ಎಂದು



ಹೇಳಿದ ಯಮಧರ್ಮರಾಯ ಬಾಲಕನ ನಮ್ರತೆ ಮತ್ತು ಜಾಣ್ಮೆಯನ್ನು ಕಂಡು ಬೆರಗಾಗಿ ಮತ್ತೊಂದು ವರವನ್ನು ಕೇಳು ಎಂದು ಹೇಳಲು ಆತ್ಮದ ಕುರಿತಾದ ಪ್ರಶ್ನೆಯನ್ನು, ಮರಣದ ನಂತರದ ಮನುಷ್ಯ ಬದುಕಿನ ಕುರಿತು ತಿಳಿಸಿ ಹೇಳಲು ಬಾಲಕ ನಚಿಕೇತ ಯಮಧರ್ಮರಾಯನನ್ನು ಕೋರಿದ. ಎಂತೆಂಥ ಮಹಾನ್ ಋಷಿಗಳಿಗೂ ಅರ್ಥವಾಗದ ಜೀವನ್ಮರಣದ ಕುರಿತಾದ ಆತ್ಮವಿದ್ಯೆಯನ್ನು ಅನುಗ್ರಹಿಸಲು ಕೇಳುವುದರ ಬದಲು ಆಯುಷ್ಯ, ಐಶ್ವರ್ಯ, ಅರಮನೆ, ದಾಸ ದಾಸಿಯರು, ಇಡೀ ಜಗತ್ತಿನ ಒಡೆತನ ಏನು ಬೇಕಾದರೂ ಕೇಳಿಕೋ ಎಂದು ಯಮಧರ್ಮರಾಯ ನಚಿಕೇತನಿಗೆ ಸಲಹೆ ಮಾಡಿದ.

ಇದಾವುದಕ್ಕೂ ಒಪ್ಪದ ಕಾರಣ ಯಮರಾಜನು ಜನನ ಮರಣಗಳ ಚಕ್ರದ ಕುರಿತಾದ ವಿವರ, ಆತ್ಮ ವಿದ್ಯೆ, ಮೋಕ್ಷ ಪ್ರಾಪ್ತಿಯ ಕುರಿತು ಸಂಪೂರ್ಣ ವಿವರವಾಗಿ ಬಾಲಕ ನಚಿಕೇತನಿಗೆ ವಿವರಿಸಿದನು. ಜಗತ್ತಿನ ಅತಿರಥ ಮಹಾರಥರೆನ್ನಿಸಿಕೊಂಡ ಮಹರ್ಷಿಗಳು ಸಾಧಿಸಲಾಗದ ವಿಷಯಗಳನ್ನು 5 ವರ್ಷದ ಪುಟ್ಟ ಬಾಲಕ ನಚಿಕೇತ ಸಂಪೂರ್ಣವಾಗಿ ಅರಿತುಕೊಂಡನು. ಬಾಲಕನ ಅಗಾಧ ಗ್ರಹಣ ಶಕ್ತಿಯನ್ನು ಕಂಡು ಯಮ ಆಶ್ಚರ್ಯ ಚಕಿತನಾದನು.

ಮನುಷ್ಯನು ತನ್ನ ಜೀವಿತಾವಧಿಯಲ್ಲಿ ಎರಡು ಮಾರ್ಗಗಳನ್ನು ಆಯ್ದುಕೊಳ್ಳಬಹುದು, ಒಂದು ಆತ್ಮಜ್ಞಾನದ ದಾರಿಯಾದರೆ ಮತ್ತೊಂದು ಇಂದ್ರಿಯ ಸುಖದ ದಾರಿ. ಎಷ್ಟೋ ಬಾರಿ ಮನುಷ್ಯ ಇಂದ್ರಿಯ ಸುಖದ ಲೋಲುಪತೆಯಲ್ಲಿ ಮುಳುಗಿ ತನ್ನ ಗುರಿಯನ್ನು ಮರೆತು ನಿರಾಶೆಯನ್ನು ಹೊಂದುತ್ತಾನೆ. ಕೆಲ ಮಹಾನ್ ವ್ಯಕ್ತಿಗಳು ಮಾತ್ರ ಇಂತಹ ಇಂದ್ರಿಯ ಸುಖದ ಲೋಲುಪತೆಯನ್ನು ತಿರಸ್ಕರಿಸಿ, ಬದುಕಿನ ನಶ್ವರತೆಯನ್ನು ಅರಿತು ಮಹಾನ್ ಋಷಿಗಳಾಗಿ ಪರಿವರ್ತಿತರಾಗುತ್ತಾರೆ. ಚಿಕ್ಕ ಬಾಲಕನಾದ ನೀನು ಇಂತಹ ಸಾಧನಾ ಪಥವನ್ನು ಆರಿಸಿಕೊಂಡು ಅದಕ್ಕಾಗಿ ಹಂಬಲಿಸುತ್ತಿರುವುದು ಕಂಡು ನನಗೆ ಸಂತಸವಾಗಿದೆ ಎಂದು ಯಮರಾಜ ಉಸುರಿದ.

ಆತ್ಮಕ್ಕೆ ಹುಟ್ಟಿಲ್ಲ ಸಾವು ಇಲ್ಲ, ಆತ್ಮವು ಯಾವುದರಿಂದಲೂ ಉದ್ಭವಿಸಿಲ್ಲ ಮತ್ತು ಆತ್ಮದಿಂದ ಕೂಡ ಏನು ಉದ್ಭವಿಸುವುದಿಲ್ಲ... ದೇಹ ನಶಿಸಿ ಹೋಗಬಹುದು ಆದರೆ ಆತ್ಮ ಅವಿನಾಶಿ. ಆತ್ಮ ಎಂಬುದು ಕಾಲಾತೀತ, ಗುಣಾತೀತ, ಅನಂತ, ಆತ್ಮವು ತರ್ಕಕ್ಕೆ ಅತೀತವಾದದ್ದು, ಸೂಕ್ಷ್ಮಾತಿ ಸೂಕ್ಷ್ಮ ವಾದದ್ದು. ಅನಿರ್ದಿಷ್ಟ, ಅಸೀಮವಾದದ್ದು. ಆತ್ಮ ಅಣುವಿಗಿಂತಲೂ ಚಿಕ್ಕದು, ಬ್ರಹ್ಮಾಂಡಕ್ಕಿಂತಲೂ ದೊಡ್ಡದು. ಆತ್ಮದೊಂದಿಗೆ ಏಕಾತ್ಮತೆಯನ್ನು ಹೊಂದಿರುವ ವ್ಯಕ್ತಿಯನ್ನು ಹೊರತುಪಡಿಸಿ ಬೇರಾರಿಂದಲೂ ಆತ್ಮ ವಿದ್ಯೆಯನ್ನು ಕಲಿಯಲು ಸಾಧ್ಯವಿಲ್ಲ.

ದೇಹ ಮತ್ತು ಆತ್ಮಗಳು ಬೇರೆ ಬೇರೆ ಎಂಬ ಸತ್ಯವನ್ನು ಅರಿತೂ ಕೂಡ ಮನುಷ್ಯ ಇಂದ್ರಿಯ ಸುಖದ ಲಾಲಸೆಯಲ್ಲಿ ಜನನ ಮರಣಗಳ ಚಕ್ರದ ಸುಳಿಯಲ್ಲಿ ಸುತ್ತುತ್ತಾನೆ. ಆತ್ಮವಿದ್ಯೆಯನ್ನು ಬ್ರಹ್ಮ ಜಿಜ್ಞಾಸೆ ಮತ್ತು ಚಿಂತನೆಗಳಿಂದ ಮಾತ್ರ ಅರಿಯಬಹುದು. ಹನ್ನೊಂದು ರಂಧ್ರಗಳಾದ ಎರಡು ಕಣ್ಣುಗಳು, ಎರಡು ಮೂಗಿನ ಹೊರಳೆಗಳು, ಎರಡು ಕಿವಿಗಳು, ಒಂದು ಬಾಯಿ, ಹೊಕ್ಕಳು, ಬ್ರಹ್ಮ ರಂಧ್ರ(ನೆತ್ತಿಯ ಭಾಗ) ಮತ್ತು 2 ವಿಸರ್ಜನಾಂಗಗಳನ್ನು ಹೊಂದಿರುವ ದೇಹವನ್ನು ಕಾಪಾಡುವ ಶಕ್ತಿಯನ್ನು ಆತ್ಮವು ಹೊಂದಿದೆ.

ಹೀಗೆ ಆತ್ಮವಿದ್ಯೆಯ ಕುರಿತಾದ ಎಲ್ಲ ವಿವರಗಳನ್ನು ನಚಿಕೇತನಿಗೆ ನೀಡಿದ ಯಮ ಮತ್ತೆ ಮುಂದುವರಿಸಿ ಮತ್ತು ಮ ಕಾರಗಳನ್ನು ಒಳಗೊಂಡಿರುವ ಓಂಕಾರವು ಪರಬ್ರಹ್ಮ ಸ್ವರೂಪವಾಗಿದ್ದು ಓಂ ಎಂಬ ಪದವನ್ನು ಪುರುಷ, ಸ್ತ್ರೀ,ಮಕ್ಕಳು ಮುದುಕರು ಎಂಬ ಭೇದವಿಲ್ಲದೆ ಯಾರು ಬೇಕಾದರೂ ಉಚ್ಚರಿಸಬಹುದು. ಸೃಷ್ಟಿ, ಸ್ಥಿತಿ, ಲಯಗಳ ರೂಪವಾಗಿರುವ, ಅ ಉ ಮ ಕಾರಗಳನ್ನು ದೀರ್ಘವಾಗಿ ಉಸಿರನ್ನೆಳೆದುಕೊಂಡು ಒಂದೊಂದಾಗಿ ಹೇಳುವ ಮೂಲಕ ಅಂತಿಮವಾಗಿ ಓಂಕಾರವನ್ನು ಒಟ್ಟಾಗಿ ಹೇಳುವ ಮೂಲಕ ಆತ್ಮ ಸಾಕ್ಷಾತ್ಕಾರವನ್ನು ಕಂಡುಕೊಳ್ಳಬಹುದು. ಈ ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ ಎಲ್ಲವೂ ಒಂದಲ್ಲ ಒಂದು ದಿನ ನಶಿಸಿ ಹೋಗುತ್ತದೆ ಎಂಬುದು ಮಾತ್ರ ಶಾಶ್ವತ ಸತ್ಯ.

ಹೀಗೆ ಸಾವಿನ ನಂತರದ ರಹಸ್ಯವನ್ನು ಹೇಳಿದ ಯಮ ಮಹಾರಾಜ ನಚಿಕೇತನನ್ನು ಸಗೌರವದಿಂದ ಪೃಥ್ವಿಗೆ ಕಳುಹಿಸಿಕೊಟ್ಟನು. ನೋಡಿದಿರಾ ಸ್ನೇಹಿತರೆ! ಯಮ ಮತ್ತು ನಚಿಕೇತರ ಸಂವಾದದ ಈ ಕಥೆ ನಮ್ಮ ಉಪನಿಷತ್ತುಗಳಲ್ಲಿ ಪ್ರಮುಖವಾಗಿ ಉಲ್ಲೇಖಿತವಾಗಿದ್ದು, ಆತ್ಮವಿದ್ಯೆಯ ಕುರಿತಾದ ಅನೇಕ ವಿಷಯಗಳನ್ನು ಒಳಗೊಂಡಿದ್ದು ಮುಖ್ಯವಾಗಿ ಬಾಲಕ ನಚಿಕೇತನ ಧೈರ್ಯ, ಶ್ರದ್ಧೆ ಮತ್ತು ಆತ್ಮವಿದ್ಯೆಯನ್ನು ಕಲಿಯಬೇಕೆಂಬ ಹಂಬಲಗಳು ಇಲ್ಲಿ ವ್ಯಕ್ತವಾಗಿದೆ.

## ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ: ಕರಪತ್ರ ವಿತರಿಸಿ ಜನಜಾಗೃತಿ

**ಹಂಪಿ ಟೈಮ್ಸ್ ಹೊಸಪೇಟೆ**

ಸೆಪ್ಟೆಂಬರ್ 15ರಂದು ನಿಗದಿಯಾದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಮಾನವ ಸರಪಳಿ ರಚನೆ ಕಾರ್ಯಕ್ರಮದಲ್ಲಿ ಜಿಲ್ಲೆಯ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಸಂದೇಶ ನೀಡಲು ಕರಪತ್ರ ವಿತರಣೆ ಮಾಡಿ ಜಾಗೃತಿ ಮೂಡಿಸಲಾಯಿತು.

ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ಎಸ್. ಅವರು ಸೆಪ್ಟೆಂಬರ್ 11ರಂದು ಹೊಸಪೇಟೆ ನಗರ ಸೇರಿದಂತೆ ವಿವಿಧೆಡೆಯ ಕಚೇರಿಗಳು ಮತ್ತು ಇನ್ನಿತರ ಕಡೆಗಳಲ್ಲಿ ಸಂಚರಿಸಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ





ದಿನಾಚರಣೆಯ ಕಾರ್ಯಕ್ರಮದ ಸರಪಳಿ ರಚಿಸುವ ಮಾರ್ಗ ನಕ್ಷೆ ಸೇರಿದಂತೆ ಇನ್ನಿತರ ಮಾಹಿತಿ ಒಳಗೊಂಡ ಕರಪತ್ರಗಳನ್ನು ವಿತರಿಸಿ ಜನಜಾಗೃತಿ ಮೂಡಿಸಿದರು.

**ಮಾರ್ಗ ಮಧ್ಯೆ ಬಣ್ಣದ ಗುರುತು:** ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಮಾನವ ಸರಪಳಿ ನಿರ್ಮಾಣದ ಕಾರ್ಯಕ್ಕಾಗಿ ಮಾರ್ಗ ಮಧ್ಯೆ ಬಣ್ಣದ ಗುರುತು ಮತ್ತು ಸಂಖ್ಯೆಗಳನ್ನು ಬರೆಯುವ ಕಾರ್ಯವು ಸಹ ವಿಜಯನಗರ ಜಿಲ್ಲೆಯಲ್ಲಿ ನಡೆಯಿತು.

## ಮುಖ್ಯಮಂತ್ರಿಗಳಿಗೆ ಶಾಸಕ ಹೆಚ್.ಆರ್.ಗವಿಯಪ್ಪ ಅಭಿನಂದನೆ

ಮೊದಲ ಪುಟದಿಂದ

ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಗಿತ್ತು. ಇದರಿಂದ ವಿಜಯನಗರ ಜಿಲ್ಲೆಯ ಮೀನುಗಾರರು ತೊಂದರೆ ಅನುಭವಿಸುತ್ತಿದ್ದರು. ನಮ್ಮ ಜಿಲ್ಲೆಯು ತುಂಗಭದ್ರಾ ನದಿಯು ಸೇರಿದಂತೆ ಆಣೆಕಟ್ಟನ್ನು ಒಳಗೊಂಡಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಾರರು ಇರುವುದರಿಂದ ಅವರ ಕುಂದುಕೊರತೆಗಳನ್ನು ಬಗೆಹರಿಸಲು ವಿಜಯನಗರ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕರ ಕಚೇರಿ ಅತೀ ಅವಶ್ಯವಿದೆ ಎಂದು ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರಿಗೆ ಹಾಗೂ ಮೀನುಗಾರಿಕಾ ಸಚಿವರಾದ ಮಂಕಾಳ ವೈದ್ಯ ಅವರಿಗೆ ಮನವಿ ಮಾಡಲಾಗಿತ್ತು.

ತಮ್ಮ ಮನವಿಯಂತೆ ವಿಜಯನಗರ ಜಿಲ್ಲೆಗೆ ಮೀನುಗಾರಿಕೆ ಉಪ ನಿರ್ದೇಶಕರು ಒಳಗೊಂಡು ಇನ್ನುಳಿದ ಸಿಬ್ಬಂದಿ ಸೇರಿ 05 ಹುದ್ದೆಗಳ ಸಮೇತ ಕಚೇರಿ ಸೃಜಿಸಲು ರಾಜ್ಯ ಸರ್ಕಾರವು ಆದೇಶ ಹೊರಡಿಸಿರುವ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಮೀನುಗಾರಿಕೆ ಸಚಿವರಿಗೆ ತಾವು ಹೃದಯಪೂರ್ವಕ ಅಭಿನಂದನೆ ಸಲ್ಲಿಸುವುದಾಗಿ ಶಾಸಕ ಗವಿಯಪ್ಪ ತಿಳಿಸಿದ್ದಾರೆ.

## ಎಸ್ಸೆಸ್ಸೆಲ್ಸಿ, ಐಟಿಐ, ಡಿಪ್ಲೋಮ ಅಲ್ಪಾವಧಿ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯ ಹರಿಹರ ರಸ್ತೆ ಮರಿಯಮ್ಮನ ಹಳ್ಳಿಯಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿ.ಟಿ.ಮತ್ತು ಟಿ.ಸಿ.) 2024-25 ನೇ ಸಾಲಿನ ಅಲ್ಪಾವಧಿ ತರಬೇತಿಗಳಾದ ಟೂಲ್ ರೂಂ ಮಷಿನಿಸ್ಟ್, ಸಿಎನ್‌ಸಿ ಟೆಕ್ನಾಲಜಿಸ್ಟ್, ರೊಬೊಟಿಕ್ ಟೆಕ್ನಾಲಜಿಸ್ಟ್, ಎಲೆಕ್ಟ್ರಿಕಲ್ ಇನ್‌ಸ್ಟಾಲೇಷನ್ ಲ್ಯಾಬ್, ಎಲೆಕ್ಟ್ರಿಕಲ್ ವೈರಿಂಗ್‌ಲ್ಯಾಬ್, ಪಿಎಲ್‌ಸಿ ಪ್ರೋಗ್ರಾಮಿಂಗ್ ಲ್ಯಾಬ್, ಬೇಸಿಕ್ ಎಲೆಕ್ಟ್ರಾನಿಕ್ಸ್ ಲ್ಯಾಬ್, ಟರ್ನರ್, ಮಿಲ್ಲರ್, ಗ್ರೈಂಡರ್, ಫಿಟ್ಟರ್, ಕ್ಯಾಡ್, ಕ್ಯಾಮ್ (ಆಟೋ ಕ್ಯಾಡ್, ಮಾಸ್ಟರ್ ಕ್ಯಾಮ್, ಸಾಲಿಡ್ ವರ್ಕ್ಸ್, ಪ್ರೋ-ಇ, ಯೂನಿ ಗ್ರಾಫಿಕ್ಸ್ ಮತ್ತು ಕ್ಯಾಟಿಯಾ) ಕೋರ್ಸ್‌ಗಳಿಗೆ, ಎಸ್.ಎಸ್.ಎಲ್.ಸಿ, ಐಟಿಐ, ಡಿಪ್ಲೋಮ ಪಾಸ್/ಫೇಲ್ ಮತ್ತು ಬಿ.ಇ. ಓದುತ್ತಿರುವ ಪಾಸಾದ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, (ಜಿ.ಟಿ.ಮತ್ತು ಟಿ.ಸಿ.) ಹೊಸಪೇಟೆ ಇವರನ್ನು ಖುದ್ದಾಗಿ ಅಥವಾ ಮೊ.ಸಂ.:8722999929, 7795969915, 9845416198ಗೆ ಸಂಪರ್ಕಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 16 ಕೊನೆಯ ದಿನವಾಗಿರುತ್ತದೆ ಎಂದು ಮರಿಯಮ್ಮನಹಳ್ಳಿ ಸರ್ಕಾರಿ ಉಪಕರಣಾಗಾರ ತರಬೇತಿ ಕೇಂದ್ರದ ಪ್ರಾಂಶುಪಾಲರು ತಿಳಿಸಿದ್ದಾರೆ.

ಈ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು (ಜಿ.ಟಿ. ಮತ್ತು ಟಿ.ಸಿ.) ರಾಜ್ಯಮಟ್ಟದಲ್ಲಿ ತಾಂತ್ರಿಕ ಕ್ಷೇತ್ರದಲ್ಲಿ ಪರಿಣಿತಿ ಹೊಂದಿದ್ದು ಜಾಗತಿಕ ಮಟ್ಟದಲ್ಲಿ ಪ್ರಸಂಶೆಗೊಳಪಟ್ಟ ಸಂಸ್ಥೆಯಾಗಿದೆ. ಉನ್ನತ ಗುಣಮಟ್ಟದ ತರಬೇತಿಯನ್ನು ನೀಡುತ್ತಾ ಸಹಸ್ರಾರು ಜನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿ ನುರಿತ ಮಾನವ ಸಂಪನ್ಮೂಲ ಒದಗಿಸಲು ಶಕ್ತವಾಗಿರುವ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಸಂಸ್ಥೆಯಾಗಿದೆ ಎಂದರು.



ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**12–09–2024 – ಗುರುವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೂಲ |
| ಯೋಗ | : ಆಯುಷ್ಮಾನ್ |
| ಕರಣ | : ಬಾಳವ |
| ಸೂರ್ಯೋದಯ | : 06:13:43 |
| ಸೂರ್ಯಾಸ್ತ | : 18:32:02 |
| ರಾಹು ಕಾಲ | : 13:55–15:27 |
| ಯಮಘಂಡ ಕಾಲ | : 06:14–07:46 |
| ಗುಳಿಕ ಕಾಲ | : 09:18–10:51 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 11–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.88 ಅಡಿ |
| ಒಳ ಹರಿವು | 27861 ಕ್ಯುಸೆಕ್ |
| ಹೊರ ಹರಿವು | 26478 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.304 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1622.68 ಅಡಿ |
| ಒಳ ಹರಿವು | 2959 ಕ್ಯುಸೆಕ್ |
| ಹೊರ ಹರಿವು | 10001 ಕ್ಯುಸೆಕ್ |
| ಸಾಮರ್ಥ್ಯ | 69.170 ಟಿಎಂಸಿ |

# ಪ್ರಕೃತಿ ರಕ್ಷಣೆ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ

## ನ್ಯಾಯಧೀಶ ಕೆ.ಜಿ ಶಾಂತಿ ಹೇಳಿಕೆ । ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ

■ ಹಂಪಿ ಟೈಮ್ಸ್ ಬಳ್ಳಾರಿ

ಪ್ರಕೃತಿಯಿಂದ ಸ್ವಚ್ಛಂದ ಗಾಳಿ, ಉತ್ತಮ ಮಳೆ-ಬೆಳೆ ದೊರೆಯುತ್ತಲಿದ್ದು, ಅರಣ್ಯ ಅಥವಾ ಪ್ರಕೃತಿ ಸಂರಕ್ಷಣೆ ಕೇವಲ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಕೆಲಸ ಮಾತ್ರವಲ್ಲದೇ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ನ್ಯಾ. ಕೆ.ಜಿ ಶಾಂತಿ ಅವರು ಹೇಳಿದರು.

ಅರಣ್ಯ ಇಲಾಖೆ ಬಳ್ಳಾರಿ ವೃತ್ತ ಹಾಗೂ ಬಳ್ಳಾರಿ ವಿಭಾಗ ವತಿಯಿಂದ ನಗರದ ರೇಡಿಯೋ ಪಾರ್ಕ್‌ನ ಐಟಿಐ ಕಾಲೇಜು ಎದುರುಗಡೆಯ ಕಿರು ಮೃಗಾಲಯ ಆವರಣದ ಬಳ್ಳಾರಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಆಯೋಜಿಸಿದ್ದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅರಣ್ಯ ಹುತಾತ್ಮರ ಸ್ಮಾರಕಕ್ಕೆ ಹೂಗುಚ್ಛ ಸಮರ್ಪಿಸಿ ಮಾತನಾಡಿದರು.

ಅರಣ್ಯ ರಕ್ಷಣೆಗೆ ಅನೇಕ ಮಹನೀಯರು ತಮ್ಮ ಜೀವದ ಹಂಗು ತೊರೆದು ಪ್ರಕೃತಿಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ. ಕೆಲವರು ಪ್ರಾಣ ತ್ಯಾಗ ಬಲಿದಾನದಿಂದ ಹುತಾತ್ಮರಾಗಿದ್ದು, ಅಂತಹ ಹುತಾತ್ಮರನ್ನು ಪ್ರತಿದಿನ ಸ್ಮರಿಸಸಿಕೊಂಡು ಕಾಡು-ನಾಡು ಸಂರಕ್ಷಿಸುವ ಸಂಕಲ್ಪ ಹೊಂದಬೇಕು ಎಂದು ತಿಳಿಸಿದರು.

ನಮ್ಮ ದೇಶ, ನಮ್ಮ ಅರಣ್ಯ, ನಮ್ಮ ಪ್ರಕೃತಿ ರಕ್ಷಣೆಗೆ ನಮ್ಮ ಕೊಡುಗೆ ಕುರಿತು ವಿಚಾರ ಮಾಡಬೇಕು. ಪ್ರಸ್ತುತ ದಿನಮಾನಗಳಲ್ಲಿ ಅರಣ್ಯ ಇಲಾಖೆಯ ಸಹಯೋಗದಲ್ಲಿ ಏಕ್ ಮಾ ಏಕ್ ಪೇಡ್ (ತಾಯಿಯ ಹೆಸರಲ್ಲಿ ಒಂದು ಗಿಡ) ಕಾರ್ಯಕ್ರಮವು ಒಳ್ಳೆಯ ಉದ್ದೇಶದಿಂದ ಕೂಡಿದ್ದು, ಸಾರ್ವಜನಿಕರಲ್ಲಿ ಪರಿಸರ ಜವಾಬ್ದಾರಿಯನ್ನು ಜ್ಞಾಪಿಸಲು ಸಹಕಾರಿಯಾಗಿದೆ ಎಂದು ನ್ಯಾಯಾಧೀಶರು ಶ್ಲಾಘಿಸಿದರು.



ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ಅರಣ್ಯ ಉಳಿವಿಗಾಗಿ ಪ್ರಾಣ ತ್ಯಾಗಮಾಡಿದ ಹುತಾತ್ಮರ ಶ್ರಮವನ್ನು ಸ್ಮರಿಸುವುದು ಅಗತ್ಯವಾಗಿದ್ದು, ಅರಣ್ಯ ರಕ್ಷಣೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕಿದೆ ಎಂದರು.

ಅರಣ್ಯ ಇಲಾಖೆಯ ಬಳ್ಳಾರಿ ವಿಭಾಗದ ಉಪ ಸಂರಕ್ಷಣಾಧಿಕಾರಿ ಸಂದೀಪ್ ಹೆಚ್.ಸೂರ್ಯ ವಂಶಿ ಪ್ರಾಸ್ತಾವಿಕವಾಗಿ ಮಾತನಾಡಿ, ಕೇಂದ್ರ ಸರ್ಕಾರ ಅರಣ್ಯ ಮತ್ತು ಹವಮಾನ ಇಲಾಖೆಯು ಸೆ.11 ರಂದು ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಆಚರಿಸಲು ಘೋಷಿಸಲಾಗಿದ್ದು, ಈ ದಿನ ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಯವರು ದೇಶದ ಅರಣ್ಯ ಮತ್ತು ವನ್ಯ ಜೀವಿಗಳ ಸಂರಕ್ಷಣೆಗೆ ಮಾಡಿದ ತ್ಯಾಗ ಬಲಿದಾನಗಳನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎನ್ನುತ್ತಾ, ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆಯ ಪಕ್ಷಿನೋಟವನ್ನು ವಿವರಿಸಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಮಾತನಾಡಿ, ಪ್ರಕೃತಿಯ ವನ್ಯ ಜೀವಿ ಸಂಪತ್ತಿನ ಮಹತ್ವನ್ನು ಅರಿತುಕೊಂಡು, ಜೀವ ವೈವಿದ್ಯತೆ ಉಳಿವಿಗೆ ಅರಣ್ಯವನ್ನು ಸಂರಕ್ಷಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯಯೋಜನೆ) ಮಹಮ್ಮದ್ ಫಯಾಜಿದ್ದೀನ್, ಸಾಮಾಜಿಕ ಅರಣ್ಯ ವಿಭಾಗದ ಮಾರ್ಕಂಡೇಯ, ಸಂಶೋಧನಾ ಘಟಕದ ಸಂತೋಷ್ ನಾಯ್ಕ್. ಆರ್., ತಾಂತ್ರಿಕ ಸಹಾಯಕ ಸುರೇಶ್ ತೇಲಿ, ಅರಣ್ಯ ಸಂಚಾರಿದಳದ ರವಿ ಜೆ.ಜಿ., ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶರಣ್ ಕುಮಾರ್, ವಲಯ ಅರಣ್ಯಾಧಿಕಾರಿ ಗಿರೀಶ್ ಕುಮಾರ್.ಡಿ.ಕೆ., ಸೇರಿದಂತೆ ಅರಣ್ಯ ಇಲಾಖೆ, ಪೊಲೀಸ್ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಇತರರು ಉಪಸ್ಥಿತರಿದ್ದರು.

# ಪೊಲೀಸ್ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ

■ ಹಂಪಿ ಟೈಮ್ಸ್ ಕೊಟ್ಟೂರು

ಗಣೇಶೋತ್ಸವ ಪ್ರಯುಕ್ತ ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಮನರಂಜನೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕಾರ್ಯಕ್ರಮದಲ್ಲಿ ಪಿಎಸ್‌ಐ ಗೀತಾಂಜಲಿ ಸಿಂಧೆ ಅವರ ತಂಡದಿಂದ, ಗ್ರಾಮದಲ್ಲಿ ಬೆಂಕಿ ಅವಘಡ ಸಂಭವಿಸಿದಾಗ ಒಬ್ಬ ವರದಿಗಾರರು ಮಾಹಿತಿಯನ್ನು ಕೊಡುವುದರ ವಿಷಯಕ್ಕೆ ಸಂಬಂಧಿಸಿದಂತೆ ನಿರೂಪಣೆ ವೇಳೆಯಲ್ಲಿ ಕಂಡುಬರುವ ಹಾಸ್ಯ ಸಂಗತಿಗಳನ್ನು ಕಿರು ನಾಟಕ ಮೂಲಕ ಪ್ರದರ್ಶಿಸಿ ವೀಕ್ಷಕರಲ್ಲಿ ಹರ್ಷ ಮೂಡಿಸಿದರು.

ಎ.ಎಸ್.ಐ ಹುಲಿಯಪ್ಪ ತಂಡದ ವತಿಯಿಂದ ಸತ್ಯಹರಿಶ್ಚಂದ್ರ ಸಿನಿಮಾದ "ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪಾ" ಎಂಬ ಗೀತೆಗೆ ಹೆಜ್ಜೆ ಹಾಕಿ ನೋಡುಗರ ಗಮನವನ್ನು ಸೆಳೆದರು. ಮತ್ತಷ್ಟು ಸಂಭ್ರಮಕ್ಕೆ ಇದು ಮೆರುಗು ಮೂಡಿಸಿತು. ಪ್ರತಿನಿತ್ಯ ಒತ್ತಡದ ನಡುವೆ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗೆ ಈ ಕಾರ್ಯಕ್ರಮವು ಸಂಭ್ರಮದ ವಾತಾವರಣ ವಾಗಿತ್ತು.

ಸ್ನೇಹ ಲೋಕ ಮೇಲೋಡೀಸ್ ಆರ್ಕೇಸ್ಟ್ರಾ ಕೊಪ್ಪಳ ವತಿಯಿಂದ ವಿವಿಧ ಸಿನಿಮಾದ ಗೀತೆಗಳನ್ನು ಹಾಡಲಾಯಿತು.

ಮಕ್ಕಳು ವಿವಿಧ ಗೀತೆಗಳ ನೃತ್ಯ ಮಾಡಿದರು. ಈ ಸಂದರ್ಭದಲ್ಲಿ ಸಿಪಿಐ ವೆಂಕಟಸ್ವಾಮಿ, ಹೆಚ್.ಬಿ.ಹಳ್ಳಿಯ ಸಿಪಿಐ ವಿಕಾಸ ಲಮಾಣಿ, ಸೇರಿದಂತೆ ಪೊಲೀಸ್ ಸಿಬ್ಬಂದಿ ಹಾಗೂ ಅನೇಕರು ಉಪಸ್ಥಿತರಿದ್ದರು.



14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ಮಾನವೀಯ ಮೌಲ್ಯ ಮೈಗೂಡಿಸಿಕೊಳ್ಳಿ

## ನ್ಯಾ.ರಾಜೇಶ್ ಎನ್.ಹೊಸಮನೆ ಹೇಳಿಕೆ । ವಿಶ್ವ ಹಿರಿಯ ನಾಗರಿಕರ ದಿನಾಚರಣೆ



■ ಹಂಪಿ ಟೈಮ್ಸ್ ಬಳ್ಳಾರಿ

ಪ್ರಸ್ತುತದಲ್ಲಿ ಕಿರಿಯರು ಹಿರಿಯರಿಗೆ ಗೌರವಕೊಡಲಾಗದ ಸ್ಥಿತಿ ನಿರ್ಮಾಣವಾಗಿ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಹಾಗಾಗಿ ಕಿರಿಯರು ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕಾಗಿದೆ ಎಂದು ಜಿಲ್ಲಾ ಕಾನುನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಹೇಳಿದರು.

ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ನಗರದ ಕಂಟೋನ್‌ಮೆಂಟ್‌ನ ಶಾಂತಿ ಧಾಮ ಆವರಣದಲ್ಲಿ ಮಂಗಳವಾರ ಹಿರಿಯ ನಾಗರಿಕರಿಗಾಗಿ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶ ಅಭಿವೃದ್ದಿ ಪಥದಲ್ಲಿ ಸಾಗುತ್ತಿದ್ದು, ಈ ಹಿಂದೆ ಕಿರಿಯರು ಹಿರಿಯರ ಮಾತುಗಳಿಗೆ ಗೌರವಕೊಡುತ್ತಿದ್ದರು. ಆದರೆ ಈಗ ಆ ಮೌಲ್ಯಗಳು ಕಾಣುತ್ತಿಲ್ಲ. ಹಿರಿಯ ನಾಗರಿಕರ ಅನುಭವದ ವಿಚಾರಧಾರೆಗಳೇ ಕಿರಿಯರಿಗೆ ದಾರಿ ದೀಪವಾಗಬೇಕು ಎಂದು ತಿಳಿಸಿದರು.

ಹಿರಿಯ ನಾಗರಿಕರನ್ನು ಕಡೆಗಣಿಸದೇ ಸಮಾಜದ ಅವಿಭಾಜ್ಯ ಅಂಗವೆಂದು ಪರಿಗಣಿಸಬೇಕು. ಹಿರಿಯ ನಾಗರಿಕರ ಸಮಸ್ಯೆ-ಸಂಕಷ್ಟಗಳು ಏನೇ ಇದ್ದರೂ ಸಂಬಂಧಿಸಿದ ಅಧಿಕಾರಿಗಳನ್ನು ಹಾಗೂ ಹಿರಿಯ ನಾಗರೀಕರ ಸಹಾಯವಾಣಿ ಕೇಂದ್ರವನ್ನು ಹಾಗೂ ಜಿಲ್ಲಾ ನ್ಯಾಯಾಧೀಶರನ್ನು ಸಂಪರ್ಕಿಸಬಹುದೆಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ರಾಮಕೃಷ್ಣ ನಾಯಕ್.ಎಂ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್.ಗೋವಿಂದಪ್ಪ ಅವರು ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಎನ್.ಡಿ. ವೆಂಕಮ್ಮ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧೀಕ್ಷಕಿಯರಾದ ನಂದಿನಿ, ಜೆ.ಸುವರ್ಣಲತಾ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಲೆ ನಾಗಪ್ಪ, ನಿರಾಶ್ರಿತರ ಪರಿಹಾರ ಕೇಂದ್ರ ಅಧೀಕ್ಷಕ ಕೆ.ಪಿ.ಚಿನ್ನ ಪಾಲಯ್ಯ, ಕುರುಗೋಡು ಸ್ಮೈಲ್ ಸಂಸ್ಥೆಯ ಅಧ್ಯಕ್ಷ ಉಮಾಪತಿ ಗೌಡ, ಪಣಿರಾಜ್ ಸೇರಿದಂತೆ ಹಿರಿಯ ನಾಗರಿಕರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹಿರಿಯ ನಾಗರಿಕರಿಗೆ ಪುರುಷ ಮತ್ತು ಮಹಿಳೆಯರಿಗೆ ಕ್ರೀಡಾ ಸ್ಪರ್ಧೆಗಳಾದ ನಡಿಗೆ ಸ್ಪರ್ಧೆ, ಮ್ಯೂಸಿಕಲ್ ಚೇರ್ ಸ್ಪರ್ಧೆ ಹಾಗೂ ಬಕೆಟ್‌ನಲ್ಲಿ ರಿಂಗ್ ಎಸೆಯುವುದು ಮತ್ತು ಸಾಂಸ್ಕೃತಿಕ ಕಾರ್ಯ ಕ್ರಮಗಾಯನ ಸ್ಪರ್ಧೆ ಏಕಪಾತ್ರಭಿನಯ ಸ್ಪರ್ಧೆಗಳು ನಡೆದವು.

# ಆತ್ಮಹತ್ಯೆ ಪ್ರಕೃತಿಗೆ ವಿರುದ್ಧವಾದುದು

ಮೊದಲ ಪುಟದಿಂದ

ಬರಲು ಮುಖ್ಯ ಕಾರಣ ತಂದೆ ಅಥವಾ ತಾಯಿ ಇಲ್ಲದಿರುವುದು. ಮನೆಯಲ್ಲಿ ಕೌಟುಂಬಿಕ ಕಲಹಗಳಿಂದ, ಮಾದಕ ಪದಾರ್ಥಗಳಿಂದ, ಮೊಬೈಲ್‌ಗಳಿಂದ ಸಾಲ ಬಾಧೆ ಹಾಗೂ ಜೂಜು ಸೇರಿದಂತೆ ಹಲ ವಾರು ಕಾರಣಗಳಿಂದ ಎಂದು ತಿಳಿಸಿದರು.

ನಮ್ಮ ಮನಸ್ಸನ್ನು ಹಿಡಿತದಲ್ಲಿಟ್ಟು ಕೊಳ್ಳಬೇಕು. ಮುಖ್ಯವಾಗಿ ಸೂರ್ಯ ನಮ ಸ್ಕಾರ ಮಾಡುವುದರಿಂದ, ನಡೆದಾಡುವುದ ರಿಂದ ಪುಸ್ತಕ ಓದುವುದರಿಂದ ಹಾಗೂ ಧ್ಯಾನ ಮಾಡುವುದರಿಂದ ಕೂಡ ನಮ್ಮ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಬಹುದು ಎಂದು ಅವರು ಸಲಹೆ ಮಾಡಿದರು.

ಕಾರ್ಯಕ್ರಮದಲ್ಲಿ ಹೊಸಪೇಟೆ ತಾಲೂಕಿನ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು, ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಹೇಮಲತಾ ಬಿ. ಹುಲ್ಲೂರ, ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಧೀಶ ರಮೇಶ್ ಬಾಬು ಬಿ.ಎನ್., ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ಪ್ರಶಾಂತ್ ನಾಗಲಾಪುರ್, ಅಪರ ಸಿವಿಲ್ ನ್ಯಾಯಾಧೀಶ ಅಶೋಕ ಆರ್.ಹೆಚ್., 2ನೇ ಅಪರ ಸಿವಿಲ್ ನ್ಯಾಯಾಧೀಶ ಸಂಜೀವ್ ಕುಮಾರ್ ಜಿ., 3ನೇ ಅಪರ ಸಿವಿಲ್ ನ್ಯಾಯಾಧೀಶ ಚೈತ್ರ. ಜೆ., ವಕೀಲರ ಸಂಘದ ಅಧ್ಯಕ್ಷರಾದ ಕೆ. ಪ್ರಹ್ಲಾದ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ. ಶ್ರೀನಿವಾಸಮೂರ್ತಿ, ಜಿಲ್ಲಾ ಮಟ್ಟದ ಅಧಿಕಾರಿ ಆರ್.ಸಿ.ಹೆಚ್ ಅಧಿಕಾರಿ ಡಾ.ಜಂಬಯ್ಯ, ಆರಕ್ಷಕ ನಿರೀಕ್ಷಕ ಜಯಲಕ್ಷ್ಮೀ, ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಾಜೇಶ್, ಆರೋಗ್ಯ ಶಿಕ್ಷಣಾಧಿಕಾರಿ ಡಾ.ದೊಡ್ಡಮನಿ ಎಂ.ಪಿ, ಡಾ.ರಾಧಿಕಾ, ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿ ನಿಯರು ಉಪಸ್ಥಿತರಿದ್ದರು.



**SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ**

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲಿಷ್

# I am the Land (Poem)

**Most important 3 marks questions and answers**
**Read the statements and answer the questions that follows**

**1."Then someone tickles me plants life fruit"**
**a. Who does me refer to ?**
Ans : The word me refers to the land
**b. What constructive activities conducted on land?**
Ans : Man gives life to land by planting trees growing fruits and grass on it children dance and play on the land
**c. How does the land react to this?**
Ans : The land patiently puts up with everything
**2. " You cannot put a fence around the planet Earth"**
**a. Who is the you?**
Ans : The word you refer to the man
**b. What is the tone of the speaker here?**
Ans : The speaker is making strong declaration/ self-assertion
**c. Why does it feel so?**
Ans : The speaker land is angry because people come with guns and put fences all around it creating boundaries and barriers or The men cannot put fence around the earth because it is highly impossible
**3. "You shout, I lie patient" You buy me, I wait"**
**a. Who is shouting here?**
Ans : The man / the people
**b. Who is lying patiently?**
Ans : The land (earth).
c. What does 'I wait' suggest?
Ans : **Here I wait suggest the feeling of land patience**
**4."You say you own me, I wait"**
**a. Who is the speaker here?**
Ans : The land (earth).
**b. Who is the 'you' here?**
Ans : Readers/People.
**c. What quality of the speaker does the term 'I wait' show?**
Ans : patience
**5. "You come with guns a chain link necklace chokes me now."**
**a. Who does 'me' refer to in this context ?**
Ans : The land
**b. Who is the speaker addressing to ?**
Ans : The readers
**c. What makes the speaker breathless ?**
Ans : Chain link necklace or fence makes the speaker breathless.

**I. Answer the following questions in two or three sentences each:**

**1. "I wait" is repeated five times in the poem. What quality of the speaker is highlighted?**
Human beings are troubling the earth. They own, buy, dig, plough and fence the land. Mother earth has an ocean of patience and bears all the cruelty committed by man.

**2. Bring out the contrast between the speaker and the reader in the poem, "I am the land".**
The speaker in the poem is land. It says that it is always patient and bears all that is done to it. The reader uses the land in many ways. He digs the land, grows fruits and trees and even fights for land.

**3. What are the activities which go on over the land?**
We own, buy, dig, plough and fence the land. We also shout, fight and kill for the land. Children dance and play on land.

**4. "You cannot put a fence around the planet Earth"**
Is this a tone of weakness or self assertion? Give reason for your answer.
It is a tone of self assertion. The poet mocks at those who are greedy and wage wars to acquire more land. The earth has given everything to us. Whatever injustice we are doing, she bears everything patiently. We can put a fence between the two countries but not around the mother earth.

**5. How is the action of soldiers affect the earth?**
The soldiers come with guns and shoot their enemies. They put fence between the countries. This affect the earth with the choking. The fence appears to be the choking necklace.

**Answer the following question in 5 to 6 sentences** 1×3=3

**1) How does the mother earth express her feelings in the poem" I am the land"?**
The poem 'I am the Land' is written by Marina de Bellagenta. In this poem the earth speaks to the people. The people buy the land and say they own it .They shout but the earth lies patiently. The earth imagines itself with muddy holes and cars parked on with lights on as its staring eyes. The happiest thing that the earth feels is that the farmers ploughing the earth, plant trees, grow fruits, flowers, children play and birds sing. The earth shares its unhappy feeling that the soldiers fight against other country soldiers. They put fence between the nations. But they do not know they are choking the earth with the smoke from the wars. The fence looks like a chain link necklace that chokes the earth.
Finally the earth asserts that men can put fence between the countries but not around the earth planet The poem conveys universal brotherhood.

www.hampitimes.com - Hampi Times Margadarshi

Prepared by **Guru Hiremath,** English language teacher S. G. S. High School, Kadalabalu, Hagaribommanahalli

ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055